24 ಆಗಸ್ಟ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 165 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ

ದೇಶದ ರೈತರು ಮತ್ತು ಸಣ್ಣ ಉದ್ದಿಮೆದಾರರ ಹಿತಾಸಕ್ತಿ ವಿಚಾರದಲ್ಲಿ ರಾಜಿ ಮಾಡಿಕೊಳ್ಳದೆ, ಅಮೇರಿಕಾದ ಜೊತೆ ಮಾತುಕತೆ ನಡೆಸುತ್ತಿದ್ದೇವೆಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಶನಿವಾರ ತಿಳಿಸಿದರು.





ಈಗ ಕರ್ನಾಟಕದ ದೇವಸ್ಥಾನಗಳು ಟಾರ್ಗೆಟ್ » 2



ಮಕ್ಕಳೇ ಮಣ್ಣು ಹೊತ್ತ ಆಟದ ಮೈದಾನ! » 3



ಧರ್ಮಸ್ಥಳ ಕುರಿತು ಅಪ ಪ್ರಚಾರಕರ ವಿರುದ್ಧ ಉಗ್ರ ಕ್ರಮವಾಗಲಿ » 4

# ಸುಳ್ಳು ಸಾಕ್ಷ್ಯ: ಮುಸುಕುಧಾರಿ ಬಂಧನ

## ಧರ್ಮಸ್ಥಳ ಪ್ರಕರಣಕ್ಕೆ ತಿರುವು | ಹಣದ ಆಮಿಷವೊಡ್ಡಿ ಕರೆಸಿಕೊಂಡರು ಎಂದ ಚಿನ್ನಯ


• ಪ್ರಜೋದಯ ವರದಿ

**ಬೆಂಗಳೂರು:** ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತುಹಾಕಿದ್ದಾಗಿ ಹೇಳಿಕೆ ನೀಡಿ, ಎಸ್‌ಐಟಿ ರಚನೆಗೆ ಕಾರಣನಾಗಿದ್ದ ಅನಾಮಿಕ ದೂರುದಾರನ ವಿರುದ್ಧವೇ ಎಸ್‌ಐಟಿ ದೂರು ದಾಖಲಿಸಿಕೊಂಡು ಶನಿವಾರ ಬಂಧಿಸಿದೆ.

ಪೊಲೀಸ್ ಮಾಹಿತಿಯ ಪ್ರಕಾರ, ಇಲ್ಲಿಯವರೆಗೆ ಮುಖವಾಡ ಧರಿಸಿ ಎಸ್‌ಐಟಿ ಮುಂದೆ ಹಾಜರಾದ ದೂರುದಾರನನ್ನು ಮಂಡ್ಯ ಮೂಲದ ಸಿ.ಎನ್.ಚಿನ್ನಯ್ಯ ಎಂದು ಗುರುತಿಸಲಾಗಿದೆ. ಈತ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಸ್ಥಾನದ ಮಾಜಿ ನೈರ್ಮಲ್ಯ ಕೆಲಸಗಾರನಾಗಿದ್ದ. ಆರೋಪಗಳಿಗೆ ಸಂಬಂಧಿಸಿದಂತೆ ದೂರುದಾರ ನೀಡಿದ ಹೇಳಿಕೆಗಳು ಮತ್ತು ದಾಖಲೆಗಳಲ್ಲಿ ಅಸ್ಪಷ್ಟತೆ ಕಂಡುಬಂದ ನಂತರ ಸುಳ್ಳು ಸಾಕ್ಷ್ಯ ನುಡಿದ ಆರೋಪದ ಮೇಲೆ ಬಂಧಿಸಲಾಗಿದೆ.

ಹಲವು ಗಂಟೆಗಳ ವಿಚಾರಣೆಯ ನಂತರ ಮುಸುಕುಧಾರಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಈ ವೇಳೆ ಎಸ್‌ಐಟಿ ಪರ ವಕೀಲರು, ಚಿನ್ನಯ್ಯ ಇದ್ದಕ್ಕಿದ್ದಂತೆ ಬುರುಡೆ ಕಥೆ ಹೆಣೆಯಲು ಕಾರಣವೇನು ಆತನ ಹಿಂದೆ ಯಾರ್‍ಯಾರು ಇದ್ದಾರೆಂದು ವಿವರವಾಗಿ ತನಿಖೆ ನಡೆಸುವ ಅವಶ್ಯಕತೆ ಇದೆ. ಹೀಗಾಗಿ ಚಿನ್ನಯ್ಯ ನನ್ನು 10 ದಿನಗಳ ಕಸ್ಟಡಿಗೆ ನೀಡಬೇಕೆಂದು ಕೋರಿದರು. ನ್ಯಾಯಾಲಯವು ವಿನಂತಿ ಯನ್ನು ಪುರಸ್ಕರಿಸಿ ಎಸ್‌ಐಟಿ ವಶಕ್ಕೆ ನೀಡಲು ಆದೇಶ ಹೊರಡಿಸಿತು.

ಮುಸುಕುಧಾರಿ ಬಂಧನದ ಬಗ್ಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಪ್ರತಿಕ್ರಿಯಿಸಿ, ದೂರುದಾರ ವ್ಯಕ್ತಿಯ ಬಂಧನವಾಗಿ ರುವುದು ನಿಜ. ಸತ್ಯವನ್ನು ಹೊರತರುವುದಕ್ಕಾಗಿಯೇ ನಮ್ಮ ಸರ್ಕಾರ ಎಸ್‌ಐಟಿ ರಚಿಸಿದೆ. ಎಸ್‌ಐಟಿಯ ತನಿಖೆ ಸಂಪೂರ್ಣ ಆಗುವ ವರೆಗೂ ಯಾವ ಮಾಹಿತಿಯೂ ನೀಡುವುದಕ್ಕೆ ಬರುವುದಿಲ್ಲ. ಇದರ ಹಿಂದೆ ದೊಡ್ಡ ಜಾಲ ಇದೆ ಎಂಬ ಬಗ್ಗೆಯೂ ಆರೋಪ ಕೇಳಿ ಬಂದಿದೆ. ಇದೂ ಕೂಡ ಪತ್ತೆಯಾಗಬೇಕಲ್ಲವೇ? ಜಾಲವಿದೆಯೇ? ಇಲ್ಲವೇ ಎಂಬ ಬಗ್ಗೆಯೂ ವರದಿ ಬಂದ ಬಳಿಕವಷ್ಟೇ ನನಗೆ ಉತ್ತರಿಸಲು ಸಾಧ್ಯ. ಅಲ್ಲಿಯವರೆಗೂ ಊಹಾಪೋಹಾಗಳು ಮಾತ್ರ ಇರುತ್ತದೆರು.



### ಸತ್ಯ ಹೊರಗೆ ಬರುತ್ತಿದೆ: ವೀರೇಂದ್ರ ಹೆಗ್ಗಡೆ

ನೂರಾರು ಶವಗಳನ್ನು ಹೂತಿದ್ದೇನೆಂದು ಹೇಳಿಕೊಂಡು ಬಂದಿದ್ದ ಅನಾಮಿಕ ದೂರುದಾರ ಸಿ.ಎನ್. ಚಿನ್ನಯ್ಯನನ್ನು ಎಸ್‌ಐಟಿ ಬಂಧಿಸಿರುವುದನ್ನು ಧರ್ಮಸ್ಥಳ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಸ್ವಾಗತಿಸಿದ್ದಾರೆ. ಈಗ ಒಂದೊಂದೇ ಸತ್ಯಗಳು ಹೊರಗೆ ಬರುತ್ತಿವೆ, ಸತ್ಯಗಳನ್ನು ತೊಳೆದು ಇಟ್ಟಂತಾಗಿದೆ. ಧರ್ಮಸ್ಥಳದ ವಿರುದ್ಧ ಆಧಾರವಿಲ್ಲದ ಆರೋಪ ಮಾಡಲಾಗುತ್ತಿದೆ. ಅದರಿಂದ ದೊಡ್ಡ ಪ್ರಮಾಣದ ಭಕ್ತರು ಮತ್ತು ಸಮುದಾಯದಲ್ಲಿ ಕಳವಳ ಉಂಟಾಗಿದೆ. ಇದೀಗ ದೂರುದಾರ ಬಂಧನದಿಂದ ಸತ್ಯಾಂಶ ಹೊರ ಬಂದು, ನ್ಯಾಯ ಸಿಗುವ ನಂಬಿಕೆ ಇದೆ ಎಂದಿದ್ದಾರೆ.

**ಹಣದ ಆಮಿಷವೊಡ್ಡಿ ಕರೆಸಿಕೊಂಡರು**

ನನಗೆ ಹಣದ ಆಮಿಷವೊಡ್ಡಿ ಕರೆಸಿ ಕೊಂಡರು, ನಾನಿಲ್ಲಿ ಪಾತ್ರಧಾರನಷ್ಟೇ, ಸೂತ್ರಧಾರರು ಬೇರೆಯವರು ಎಂದು ಮುಸು ಕುಧಾರಿ ಚಿನ್ನಯ್ಯ ಎಸ್‌ಐಟಿಗೆ ತಿಳಿಸಿದ್ದಾನೆಂದು ತಿಳಿದು ಬಂದಿದೆ. ಡಿಸೆಂಬರ್ ಕೊನೆಯ ವಾರದಲ್ಲಿ ತಮಿಳು ನಾಡಿನಲ್ಲಿದ್ದ ನನ್ನನ್ನು ಗುಂಪೊಂದು ಸಂಪರ್ಕಿಸಿತ್ತು. ಮಾತುಕತೆ ನಡೆಸುವ ವೇಳೆ ಹಣದ ಆಮಿಷ ಒಡ್ಡಿದ್ದರು. ಈ ಪ್ರಕರಣದ ಮುಖ್ಯ ನಾಯಕ ನೀನು. ನಿನ್ನಿಂದಲೇ ಈ ಪ್ರಕರಣಕ್ಕೆ ರೋಚಕ ತಿರುವು ಸಿಗುತ್ತದೆಂದು ಹೇಳಿದ್ದರು. ಯಾವುದೇ ಕಾರಣಕ್ಕೂ ನೀನು ಭಯ ಪಡುವ ಅಗತ್ಯವಿಲ್ಲ. ತನಿಖೆಯಾದ ನಂತರ ಹಲವು ಜನ ದೂರುದಾರರು ಬರುತ್ತಾರೆ. ಎಲ್ಲಾ ತನಿಖೆ ನಡೆಯುತ್ತದೆಂದು ಭರವಸೆ ನೀಡಿದ್ದರು. ಆರಂಭದಲ್ಲಿ ಬೆಂಗಳೂರಿನಲ್ಲಿ ನನಗೆ ಸ್ವಲ್ಪ ತರಬೇತಿ ನೀಡಲಾಗಿತ್ತು. ಪೊಲೀಸರು ಕೇಳಿದಾಗ ಯಾವ ರೀತಿ ಉತ್ತರ ಹೇಳಬೇಕೆ ನ್ನುವುದನ್ನು ತಿಳಿಸಲಾಗಿತ್ತು ಎಂಬ ಹೇಳಿಕೆ ನೀಡಿದ್ದಾನೆಂದು ತಿಳಿದು ಬಂದಿದೆ.

### ಧರ್ಮದ ವಿಚಾರದಲ್ಲಿ ರಾಜಕೀಯ ಬೇಡ: ಡಿಕೆಶಿ

ನಾವು ಯಾರ ಪರವೂ ಇಲ್ಲ, ನ್ಯಾಯದ ಪರವಷ್ಟೇ. ಧರ್ಮದ ವಿಚಾರದಲ್ಲಿ ರಾಜಕೀಯ ಬೇಡ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳ ಪ್ರಕರಣದಲ್ಲಿ ಸಾಕ್ಷಿ ದೂರು ದಾರನ ಬಂಧನವಾಗಿದೆ. ಈ ಪ್ರಕರಣದ ಬಗ್ಗೆ ಬಿಜೆಪಿಯವರು ಏನೂ ಮಾತಾಡಿರಲಿಲ್ಲ. ಬಿಜೆಪಿಯವರು ಅಡ್ಡಗೋಡೆ ಮೇಲೆ ದೀಪ ಇಡುವ ಕೆಲಸ ಮಾಡುತ್ತಿದ್ದರು. ಷಡ್ಯಂತ್ರದ ಕುರಿತು ನಾನು ಪ್ರಸ್ತಾವನೆ ಮಾಡಿದ ಮೇಲೆ ಅವರು ಮಾತನಾಡಿದ್ದಾರೆಂದು ಹೇಳಿದರು.

ಎಸ್‌ಐಟಿ ತನಿಖೆಯನ್ನು ಧರ್ಮಸ್ಥಳದ ಕುಟುಂಬದವರೇ ಸ್ವಾಗತಿಸಿದ್ದಾರೆ. ಸ್ವತಃ ಅವರ ಕುಟುಂಬದವರೇ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ವಿಷಯ ತಿಳಿಸಿದ್ದಾರೆ. ಇನ್ನು ಇದನ್ನು ಅಧಿವೇಶ ನದಲ್ಲಿ ಬಾಲಕೃಷ್ಣ ಅವರು ಮಾತನಾಡಿದ್ದಾರೆ. ಧರ್ಮಸ್ಥಳದ ವಿಚಾರದಲ್ಲಿ ಯಾರ್‍ಯಾರ ತಪ್ಪಿದೆ ಅವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸರ್ಕಾರ, ಗೃಹ ಸಚಿವರು, ಮುಖ್ಯಮಂತ್ರಿಗಳು ಹೇಳಿ ದ್ದಾರೆ. ಆ ಕೆಲಸ ನಾವು ಮಾಡುತ್ತಿದ್ದೇವೆ. ಎಸ್‌ಐಟಿ ತನಿಖೆ ನಡೆಯುತ್ತಿದೆ. ಧರ್ಮದ ರಾಜಕಾರಣ ಮಾಡಬೇಡಿ ಎಂದರು.

# ಅಕ್ರಮ ಬೆಟ್ಟಿಂಗ್: ಶಾಸಕ ವೀರೇಂದ್ರ ಇ.ಡಿ ವಶಕ್ಕೆ

• ಪ್ರಜೋದಯ ವರದಿ

**ಬೆಂಗಳೂರು:** ಅಕ್ರಮವಾಗಿ ಬೆಟ್ಟಿಂಗ್ ಕಂಪನಿ ನಡೆಸುತ್ತಿದ್ದ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ (ಪಪ್ಪಿ) ಅವರನ್ನು ಸಿಕ್ಕಿಂನಲ್ಲಿ ಬಂಧಿ ಸಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ತಿಳಿಸಿದೆ.

ಶುಕ್ರವಾರ ಹಲವು ರಾಜ್ಯಗಳಲ್ಲಿ ನಡೆಸಿದ ದಾಳಿಯ ನಂತರ 12 ಕೋಟಿ ರೂ. ನಗದು (ಒಂದು ಕೋಟಿ ರೂ. ವಿದೇಶಿ ಕರೆನ್ಸಿ ಸೇರಿ), 6 ಕೋಟಿ ರೂ. ಮೌಲ್ಯದ ಚಿನ್ನಾಭರಣ, ಸುಮಾರು 10 ಕೆಜಿ ಬೆಳ್ಳಿ ಮತ್ತು ನಾಲ್ಕು ವಾಹನಗಳನ್ನು ವಶಪಡಿಸಿಕೊಂಡಿರುವುದಾಗಿ ಕೇಂದ್ರದ ತನಿಖಾ ಸಂಸ್ಥೆ ತಿಳಿಸಿದೆ. ಶಾಸಕರು ತಮ್ಮ ಸಹಚರರೊಂದಿಗೆ ಕ್ಯಾಸಿನೊವನ್ನು ಗುತ್ತಿಗೆ ಪಡೆಯುವ ಸಲುವಾಗಿ ಮಾತುಕತೆ ನಡೆಸಲು ಗ್ಯಾಂಗ್ಟಾಕ್‌ಗೆ ಭೇಟಿ ನೀಡಿದ್ದರೆಂದು ತನಿಖಾ ಸಂಸ್ಥೆ ತಿಳಿಸಿದೆ. ವೀರೇಂದ್ರ ಅವರ ಸಹೋದರ ಕೆ.ಸಿ. ನಾಗರಾಜ್ ಮತ್ತು ಅವರ ಮಗ ಪೃಥ್ವಿ ಎನ್.ರಾಜ್ ಅವರ ನಿವಾಸದಿಂದ ಆಸ್ತಿಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಮತ್ತೊಬ್ಬ ಸಹೋದರ ಕೆ.ಸಿ.ತಿಪ್ಪೇಸ್ವಾಮಿ ಮತ್ತು ಇತರ ಸಹಚರರು ದುಬೈನಿಂದ ಆನ್‌ಲೈನ್ ಗೇಮಿಂಗ್ ಕಾರ್ಯಾಚರಣೆಗಳನ್ನು ನಿರ್ವಹಿಸುತ್ತಿದ್ದಾರೆಂದು ಇ.ಡಿ ತಿಳಿಸಿದೆ.



ಕರ್ನಾಟಕದ ಚಿತ್ರದುರ್ಗ, ಹುಬ್ಬಳ್ಳಿ ಮತ್ತು ಬೆಂಗಳೂರು, ಜೋಧ್‌ಪುರ (ರಾಜಸ್ಥಾನ), ಸಿಕ್ಕಿಂ, ಮುಂಬೈ ಮತ್ತು ಗೋವಾ ಸೇರಿ 31 ಸ್ಥಳಗ ಳಲ್ಲಿ ತನಿಖಾ ಸಂಸ್ಥೆಯು ಶೋಧಕಾರ್ಯವನ್ನು ಮುಕ್ತಾಯಗೊಳಿಸಿದೆ.

ಪಪ್ಪೀಸ್ ಕ್ಯಾಸಿನೊ ಗೋಲ್ಡ್, ಓಷನ್ ರಿವರ್ಸ್ ಕ್ಯಾಸಿನೊ, ಪಪ್ಪೀಸ್ ಕ್ಯಾಸಿನೊ ಪ್ರೈಡ್, ಓಷನ್ 7 ಕ್ಯಾಸಿನೊ ಮತ್ತು ಬಿಗ್ ಡ್ಯಾಡಿ ಕ್ಯಾಸಿನೊ ಎಂಬ ಹೆಸರಿನ ಗೋವಾದ ಐದು ಕ್ಯಾಸಿನೊಗಳ ಮೇಲೆಯೂ ದಾಳಿ ನಡೆಸಲಾಗಿದೆ.

ಶೋಧದ ಸಮಯದಲ್ಲಿ ಸುಮಾರು 17 ಬ್ಯಾಂಕ್ ಖಾತೆಗಳು ಮತ್ತು 2 ಲಾಕರ್‌ಗಳನ್ನು ಜಪ್ತಿ ಮಾಡಲಾಗಿದೆ. ದುಬಾರಿ ಬೆಲೆಯ ವಾಹನಗಳ ಮಾಲೀಕತ್ವ ಮತ್ತು ಹಣದ ಮೂಲವನ್ನು ತನಿಖೆ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

# ಧರ್ಮಸ್ಥಳದ ವಿರುದ್ಧ ಅಪಪ್ರಚಾರ: ಸಿಬಿಐಗೆ ಆಗ್ರಹ

## ಶಾಸಕ ಸಿಮೆಂಟ್ ಮಂಜು ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ


• ಪ್ರಜೋದಯ ವರದಿ

**ಸಕಲೇಶಪುರ:** ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರಕ್ಕೆ ವಿದೇಶದಿಂದ ಹಣಕಾಸು ಬಂದಿರುವ ಬಗ್ಗೆ ವರದಿಯಾಗಿದೆ. ಈ ಕುರಿತು ಸಮಗ್ರ ತನಿಖೆ ನಡೆಸಲು ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಒತ್ತಾಯಿಸಿದರು.

ಶನಿವಾರ ಪಟ್ಟಣದಲ್ಲಿ ಬಿಜೆಪಿ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಧರ್ಮಸ್ಥಳದ ವಿಚಾರದಲ್ಲಿ ರಾಜ್ಯ ಸರ್ಕಾರದ ಧೋರಣೆಯನ್ನು ಖಂಡಿಸಿ, ಧರ್ಮದ ಉಳಿವಿಗಾಗಿ ಧರ್ಮಯುದ್ಧ ಹೋರಾಟ ನಡೆಸುತ್ತೇವೆಂದು ಹೇಳಿದರು.

ಕ್ಷೇತ್ರದ ಹೆಸರನ್ನು ಕೆಡಿಸಲು ಷಡ್ಯಂತ್ರ ರೂಪಿಸಿರುವ ತಂಡದ ಎಲ್ಲರನ್ನೂ ತಕ್ಷಣ ಬಂಧಿಸಿ ತೀವ್ರ ವಿಚಾರಣೆ ನಡೆಸಬೇಕು. ಕಳೆದ ಒಂದು ತಿಂಗಳಿಂದ ಧರ್ಮಸ್ಥಳ ವಿಷಯದಲ್ಲಿ ನಡೆದ ಬೆಳವಣಿಗೆಗಳನ್ನು ಎಲ್ಲರೂ ನೋಡಿದ್ದಾರೆ. ಸರ್ಕಾರ ತನಿಖೆಗಾಗಿ ಎಸ್‌ಐಟಿ ರಚಿಸಿದಾಗ ಅದನ್ನು ನಾವು ಸ್ವಾಗತಿಸಿದ್ದೇವು. ಈಗ ತನಿಖೆ ಪಾರದರ್ಶಕವಾಗಿ, ಸಮಗ್ರವಾಗಿ ನಡೆಯಬೇಕೆಂದು ಆಗ್ರಹಿಸಿದರು.

ಈಗಾಗಲೇ ಮಹೇಶ್ ಶೆಟ್ಟಿ ತಿಮ್ಮರೋಡಿ ಮತ್ತು ಮುಸುಕುದಾರಿ ಬಂಧನಕ್ಕೊಳಗಾಗಿರುವುದು ಸ್ವಾಗತಾರ್ಹ. ಆದರೆ, ಧರ್ಮಸ್ಥಳ ಮತ್ತು ಮಂಜುನಾಥ ದೇವರ ಬಗ್ಗೆ ಸುಳ್ಳು ಪ್ರಚಾರ ನಡೆಸುತ್ತಿರುವವರನ್ನು ಕೂಡಲೇ ಬಂಧಿಸಬೇಕು. ಯೂಟ್ಯೂಬ್ ಮೂಲಕ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಸರ್ಕಾರ ಗಂಭೀರ ಕ್ರಮ ಕೈಗೊಳ್ಳದಿರುವುದು ನಾಚಿಕೆಯ ವಿಷಯ. » ನಾಲ್ಕನೇ ಪುಟದಲ್ಲಿ



### ಮಾಜಿ ಎಂಎಲ್‌ಸಿ ಎಂ.ಎ.ಗೋಪಾಲಸ್ವಾಮಿ ನೇತೃತ್ವ

# ಕಾಂಗ್ರೆಸ್‌ನಿಂದ ಧರ್ಮಸ್ಥಳಕ್ಕೆ ಧರ್ಮಯಾತ್ರೆ

• ಪ್ರಜೋದಯ ವರದಿ

**ಹಾಸನ:** ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪ ಪ್ರಚಾರ ಮಾಡುತ್ತಿರುವುದನ್ನು ಖಂಡಿಸಿ ವಿಧಾನ ಪರಿಷತ್ ಮಾಜಿ ಸದಸ್ಯ, ಕಾಂಗ್ರೆಸ್ ಮುಖಂಡ ಎಂ.ಎ. ಗೋಪಾಲಸ್ವಾಮಿ ನೇತೃತ್ವ ದಲ್ಲಿ ಶನಿವಾರ ಧರ್ಮಸ್ಥಳಕ್ಕೆ ಧರ್ಮಯಾತ್ರೆ ನಡೆಸಲಾಯಿತು.

ಚನ್ನರಾಯಪಟ್ಟಣದಿಂದ ಹೊರಟ ಯಾತ್ರೆ ಹಾಸನದಿಂದ ಹಾದು, ಸಕಲೇಶಪುರ ಮೂಲಕ ಧರ್ಮಸ್ಥಳಕ್ಕೆ ತೆರಳಿತು. ನೂರಾರು ಕಾರು ಇತ್ಯಾದಿ ವಾಹನಗಳಲ್ಲಿ ಸಾವಿರಾರು ಕಾಂಗ್ರೆಸ್ ಮುಖಂಡರು ಹಾಗು ಕಾರ್ಯಕರ್ತರು, ಧರ್ಮಸ್ಥಳದತ್ತ ಪ್ರಯಾಣ ಬೆಳೆಸಿದರು. ಈ ವೇಳೆ ಎಲ್ಲರೂ ಧರ್ಮ ಗೆಲ್ಲಬೇಕು, ನಾವೆಲ್ಲರೂ ಧರ್ಮಸ್ಥಳ, ಡಾ.ವೀರೇಂದ್ರ ಹೆಗ್ಗಡೆ ಅವರ ಪರ ಎಂದು ಘೋಷಣೆ ಕೂಗಿದರು.

ಈ ವೇಳೆ ನಗರದ ಬೂವನಹಳ್ಳಿ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಗೋಪಾಲಸ್ವಾಮಿ ಅವರು, ನಾವೆಲ್ಲರೂ ಹಿಂದಿನಿಂದಲೂ ಧರ್ಮಸ್ಥಳದ ಮಂಜುನಾಥನನ್ನು ಧಾರ್ಮಿಕವಾಗಿ ಅಪಾರ ನಂಬಿಕೆ ಹೊಂದಿರುವವರು, ಯಾರೂ ಅದಕ್ಕೆ ಧಕ್ಕೆ ಉಂಟು ಮಾಡಬಾರದು. ಹೀಗಾಗಿ ಧರ್ಮಸ್ಥಳದ ಪರವಾಗಿ, ವೀರೇಂದ್ರ ಹೆಗ್ಗಡೆ ಅವರನ್ನು ಬೆಂಬಲಿಸಿ ಧರ್ಮಯಾತ್ರೆ ಹೊರಟಿದ್ದೇವೆ. ಮಂಜುನಾಥಸ್ವಾಮಿ ದರ್ಶನ ಮಾಡಿ, ಹೆಗ್ಗಡೆ ಅವರಿಗೆ ಧೈರ್ಯ ಹೇಳಿ ವಾಪಾಸ್ ಬರುತ್ತೇವೆ ಎಂದರು.

ಸ್ತ್ರೀಶಕ್ತಿ ಸಂಘಗಳ ಸ್ಥಾಪನೆ, ಕೆರೆ ಅಭಿವೃದ್ಧಿ, ಹೈನುಗಾರಿಕೆಗೆ ಉತ್ತೇಜನ, ಶುದ್ಧ ಕುಡಿಯುವ ನೀರಿನ ಘಟಕ » ನಾಲ್ಕನೇ ಪುಟದಲ್ಲಿ



### ಸಂಸದ ಶ್ರೇಯಸ್ ಪಟೇಲ್ ಸಾಥ್

ಧರ್ಮಯಾತ್ರೆಗೆ ಬೆಂಬಲ ಸೂಚಿಸಿ ಮಾತನಾಡಿದ ಸಂಸದ ಶ್ರೇಯಸ್ ಪಟೇಲ್ ಅವರು, ಗೋಪಾಲಸ್ವಾಮಿ ಅವರ ನೇತೃತ್ವದಲ್ಲಿ ಹೊರಟಿರುವ ಯಾತ್ರೆಗೆ ಶುಭಕೋರುವೆ. ಹಿಂದೂ ಧರ್ಮ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ಡಾ. ವೀರೇಂದ್ರ ಹೆಗ್ಗಡೆಯವರು ಸಮಾಜದ ಏಳಿಗೆಗೆ ಹಾಗು ಧರ್ಮ ಉಳಿಸಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಅವರ ಹಲವು ರೀತಿಯ ಕೊಡುಗೆ ಪ್ರಶಂಸನೀಯ, ಹಾಗಾಗಿ ಧರ್ಮ ಉಳಿಯಬೇಕು. ನಾವೆಲ್ಲರೂ ಸದಾ ಧರ್ಮಸ್ಥಳ ಮತ್ತು ವೀರೇಂದ್ರ ಹೆಗ್ಗಡೆ ಅವರ ಜೊತೆ ಇರುತ್ತೇವೆ. ಇದೇ ರೀತಿ ಎಲ್ಲಾ ತಾಲ್ಲೂಕುಗಳಿಂದ ಸಂಘಟನೆಯಾಗಿ ವೀರೇಂದ್ರ ಹೆಗ್ಗಡೆ ಅವರ ಬೆಂಬಲಕ್ಕೆ ಕೈಜೋಡಿಸಬೇಕು ಎಂದರು.

# ಚಿನ್ನಾಭರಣ ಕಳವು

**ಬೇಲೂರು:** ಮನೆ ಬಾಗಿಲು ಮುರಿದು 3.50 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗು 5 ಸಾವಿರ ನಗದು ದೋಚಿರುವ ಘಟನೆ ತಾಲ್ಲೂಕಿನ ಹಳೇಬೀಡು ಗ್ರಾಮದ ಕಲ್ಲುಮಠ ಬೀದಿ ಯಲ್ಲಿ ನಡೆದಿದೆ. ಮಂಜಪ್ಪ ಅವರು ಪತ್ನಿಯೊಂದಿಗೆ ಶುಕ್ರವಾರ ಮನೆಗೆ ಬೀಗ ಹಾಕಿಕೊಂಡು ಜಾವಗಲ್ ಸರ್ಕಲ್‌ನಲ್ಲಿರುವ ತಾವು ನಡೆಸುತ್ತಿರುವ ಅರ್ಪಿತಾ ಮೆಡಿಕಲ್ ಸ್ಟೋರ್‌ಗೆ ಹೋಗಿದ್ದರು.

ಮಧ್ಯಾಹ್ನ ಮೆಡಿಕಲ್ ಸ್ಟೋರ್‌ನಿಂದ ಊಟಕ್ಕೆಂದು ಮನೆಗೆ ಬಂದಾಗ ಮನೆಯ ಮೇಲ್ಭಾಗದ ಬಾಗಿಲನ್ನು ಕಳ್ಳರು ಆಯುಧದಿಂದ ಮೀಟಿ ತೆಗೆದು ಒಳಗೆ ಪ್ರವೇಶಿಸಿ ಒಳಗಿದ್ದ 2 ಗಾಡ್ರೇಜ್ ಬೀರು ಒಡೆದು ಅದರಲ್ಲಿದ್ದ 30 ಗ್ರಾಂ. ತೂಕದ ಸರ, 3 ಗ್ರಾಂ. ಗುಂಡಿನ ಚೈನ್, 10 ಗ್ರಾಂ. ಬೆಳ್ಳಿಯ ಪೆಂಡೆಂಟ್, 6 ಗ್ರಾಂ.ತೂಕದ 2 ಉಂಗುರ, 1 ಮೂಗುತಿ ಹಾಗು ನಗದು ದೋಚಿ ಕಳ್ಳರು ಪರಾರಿಯಾಗಿದ್ದಾರೆ. ಈ ಸಂಬಂಧ ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಸೆ.6ರಂದು ಹಳೇ ಬೇರು ಹೊಸ ಚಿಗುರು ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಆಚಾರ್ಯ ವಾಣಿಜ್ಯ ವಿದ್ಯಾ ಸಂಸ್ಥೆಯಲ್ಲಿ ವಿನೂತನ ಹಳೇ ಬೇರು ಹೊಸ ಚಿಗುರು ಕಾರ್ಯಕ್ರಮವನ್ನು ಸೆ.6 ಶನಿವಾರದಂದು ಏರ್ಪಡಿಸಲಾಗಿದೆ.

ಕಾಲೇಜಿನ ಪ್ರತಿಭಾನ್ವಿತ ಸಾಹಿತ್ಯಾಸಕ್ತ ವಿದ್ಯಾರ್ಥಿಗಳು ಸ್ವ-ರಚಿತ ಚುಟುಕು ವಾಚನ ಮಾಡುವರು. ವಿವಿಧ ಜಿಲ್ಲೆಗಳ ಕವಿಗಳು ಆಗಮಿಸಲಿದ್ದಾರೆ. ಚುಟುಕು ಸಾಹಿತ್ಯದ ಗಮ್ಯತೆ ಹಾಗೂ ಪ್ರಭಾವ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮದೊಂದಿಗೆ ರಾಜ್ಯ ಮಟ್ಟದ ಚುಟುಕು ಕವಿಗೋಷ್ಠಿ ಏರ್ಪಡಿಸಲಾಗಿದೆ ಎಂದು ಆಚಾರ್ಯ ವಾಣಿಜ್ಯ ವಿದ್ಯಾ ಸಂಸ್ಥೆಯ ಪ್ರಾಚಾರ್ಯ ಡಾ.ಹೆಚ್. ಆರ್.ಆದರ್ಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಕ್ರಮ ಮರದ ಕಾರ್ಖಾನೆ ಮುಚ್ಚಿಸದಿದ್ದರೆ ಹೋರಾಟ

## ರೈತ ಸಂಘದ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ರಾಜ್ಯದಲ್ಲಿರುವ ಅಕ್ರಮ ಮರದ ಕಾರ್ಖಾನೆಗಳನ್ನು ಮುಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಕಾನೂನು ಹೋರಾಟಕ್ಕೆ ಇಳಿಯುವುದಾಗಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರು ಎಚ್ಚರಿಕೆ ನೀಡಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 670ಕ್ಕೂ ಹೆಚ್ಚು ಅಕ್ರಮ ಮರದ ಕಾರ್ಖಾನೆಗಳು ನಡೆಯುತ್ತಿವೆ. ಈ ಎಲ್ಲಾ ಕಾರ್ಖಾನೆಗಳಿಗೆ ನಿತ್ಯವೂ ಮರಮುಟ್ಟು ರವಾನೆಯಾಗುತ್ತಿವೆ. ಇದು ಯಾರಿಂದ, ಹೇಗೆ ಎಂದು ಪ್ರಶ್ನಿಸಿದ ಅವರು, ಅಕ್ರಮ ಕಾರ್ಖಾನೆ ಗಳಿಗೆ ಸರ್ಕಾರದ ಕಡೆಯವರೇ ಮರ ಪೂರೈಕೆ ಮಾಡುವ ಮೂಲಕ ಅರಣ್ಯ ನಾಶಕ್ಕೆ ಮುಂದಾಗಿದ್ದಾರೆಂದು ಆರೋಪಿಸಿದರು.

ಕಾಡು ರಕ್ಷಣೆ ಮಾಡಬೇಕಾದವರೇ ದರೋಡೆಗೆ ನಿಂತಿದ್ದಾರೆ. ಯಾರು ಕೂಡ ಮರಗಳ್ಳರಿಗೆ ಬೆಂಬಲ ನೀಡುವುದು ಬೇಡ ಎಂಬುದು ನಮ್ಮ ಆಗ್ರಹವಾಗಿದೆ.

ಹಿಂದೆ ಸಿದ್ದರಾಮಯ್ಯ ಸರ್ಕಾರದಲ್ಲಿ ನೀಲಗಿರಿಯನ್ನು ನಿಷೇಧ ಮಾಡಬೇಕೆಂದು ತೀರ್ಮಾನಿಸಿ ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ನೀಲಗಿರಿ ಮುಕ್ತ ಮಾಡಲು ಆದೇಶ ಮಾಡಿದ್ದರು ಆದರೆ ಆಗಿಲ್ಲ. ಹಾಸನ ಜಿಲ್ಲೆಯ ಗುಂಡ್ಯ ಭಾಗದಲ್ಲಿ 24 ಕಡೆ ಜಲ ವಿದ್ಯುತ್ ಯೋಜನೆ ಕಾಮಗಾರಿ ನಡೆಯುತ್ತಿದ್ದವು. ಸಿಡಿಮದ್ದು ಸಿಡಿತದಿಂದ ಪ್ರಾಣಿಗಳು ಚದುರಿ ದೂರ ದೂರ ಓಡುತ್ತಿದ್ದವು. ಜಲವಿದ್ಯುತ್ ಯೋಜನೆ ನಿಲ್ಲಿಸಬೇಕೆಂದು ಅಂದಿನ ಸಿಎಂ, ಅರಣ್ಯ ಅಧಿಕಾರಿಗಳಿಗೆ ತಿಳಿಸಿದ್ದವು. ಆದರೆ ಯಾವುದೇ ಪ್ರಯೋಜನ ಆಗದ ಕಾರಣ 2010ರಲ್ಲಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದೇವು. ವಿಚಾರಣೆ ನಡೆಸಿದ ಕೋರ್ಟ್, 18 ವಿದ್ಯುತ್ ಯೋಜನೆ ಸ್ಥಗಿತಗೊಳಿಸಲು ಆದೇಶ ನೀಡಿತು ಎಂದರು.

ಮರದ ಕೈಗಾರಿಕೆ ಸಾಮಿಲ್, ಪ್ಲೇವುಡ್ ಫ್ಯಾಕ್ಟರಿ ಹಾಗು ಇತರೆ ಮರದ ಉತ್ಪನ್ನಗಳ ಬಗ್ಗೆ ತಂಡ ಅಧ್ಯಯನ ಮಾಡಿದಾಗ ಲೈಸೆನ್ಸ್ ಪಡೆದು » ನಾಲ್ಕನೇ ಪುಟದಲ್ಲಿ




# ಬ್ರಹ್ಮಾಂಡದ ಅನ್ವೇಷಣೆಗೆ ಸಜ್ಜಾಗಿ: ಮೋದಿ

• ಪ್ರಜೋದಯ ವರದಿ

**ನವದೆಹಲಿ:** ಮನುಕುಲದ ಭವಿಷ್ಯವನ್ನು ಇನ್ನಷ್ಟು ಉಜ್ವಲಗೊಳಿಸಲು ಬಾಹ್ಯಾಕಾಶದ ಆಳಕ್ಕೆ ತಲುಪಿ ರಹಸ್ಯ ಭೇದಿಸಲು ಸಜ್ಜಾಗುವಂತೆ ದೇಶದ ವಿಜ್ಞಾನಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಶನಿವಾರ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಮಾತನಾಡಿದ ಅವರು, ಭವಿಷ್ಯದ ದೃಷ್ಟಿಯಿಂದ ಗಗನಯಾನಿಗಳ ಪಡೆಯನ್ನು ಭಾರತ ಸಜ್ಜುಗೊಳಿಸುತ್ತಿದೆ. ಯುವ ಸಮುದಾಯ ಅದರ ಭಾಗವಾಗಬೇಕು ಎಂದಿದ್ದಾರೆ. ನಾವು ಚಂದ್ರ ಹಾಗು ಮಂಗಳವನ್ನು ತಲುಪಿದ್ದೇವೆ. ಈಗ, ಬಾಹ್ಯಾಕಾಶದ ಆಳಕ್ಕೆ ಇಳಿಯಬೇಕಾಗಿದೆ. ಅಲ್ಲಿ ಸಾಕಷ್ಟು ರಹಸ್ಯ ಅಡಗಿದ್ದು, ಮನುಕುಲದ ಭವಿಷ್ಯಕ್ಕೆ ಇದು ಹೆಚ್ಚಿನ ನೆರವಾಗಲಿದೆ. ಬಾಹ್ಯಾಕಾಶ ಕ್ಷೇತ್ರ ದಲ್ಲಿ ಒಂದರ ನಂತರ ಒಂದು ಮೈಲಿಗಲ್ಲನ್ನು ಸಾಧಿಸುತ್ತಿರುವುದು ಭಾರತ ಮತ್ತದರ ವಿಜ್ಞಾನಿಗಳ ಸಹಜ ಗುಣ ಎಂಬಂತಾಗಿದೆ ಎಂದಿದ್ದಾರೆ.

ಕೊನೆ ಎಂಬುದೇ ಇಲ್ಲದ ಬಾಹ್ಯಾಕಾಶ ಕ್ಷೇತ್ರದಲ್ಲಿ ಸದ್ಯ ಮುಂಚೂಣಿಯಲ್ಲಿರುವವರೇ ಶಾಶ್ವತ ಮುಂದಾಳು ಗಳಲ್ಲ. ದೇಶದ ಉದ್ದಗಲದ ಬಾಹ್ಯಾಕಾಶ ವಿಜ್ಞಾನಿಗಳು, ವಿದ್ಯಾರ್ಥಿಗಳು ಮತ್ತು ನೀತಿ ನಿರೂಪಕರು ಜೊತೆ ಗೂಡಿ ಈ ಅನ್ವೇಷಣೆಯ ಭಾಗವಾಗಬೇಕು. ವಿಜ್ಞಾನಿಗಳ ಕಠಿಣ ಪರಿಶ್ರಮದಿಂದಾಗಿ ಅತಿ ಶೀಘ್ರದಲ್ಲಿ ಗಗನ ಯಾನ ಯೋಜನೆವನ್ನು ಭಾರತ ಆರಂಭಿಸಲಿದೆ. ಭಾರತ ತನ್ನದೇ ಆದ ಬಾಹ್ಯಾಕಾಶ ನಿಲ್ದಾಣ ಸಜ್ಜುಗೊಳಿಸಲಿದೆ. ಈ ಕ್ಷೇತ್ರದಲ್ಲಿ ಖಾಸಗಿ ವಲಯವೂ ಪಾಲ್ಗೊಳ್ಳಬೇಕೆಂಬುದು ನನ್ನ ಆಶಯ. ಆ ಮೂಲಕ ಪ್ರತಿ ವರ್ಷ ಕನಿಷ್ಠ 50 ರಾಕೆಟ್‌ಗಳನ್ನು ಹಾರಿಸುವ ಗುರಿ ತಲುಪಬೇಕಿದೆ ಎಂದು ಹೇಳಿದ್ದಾರೆ.

ಇಂದು ಭಾರತವು ಅರೆ-ಕ್ರಯೋಜೆನಿಕ್ ಎಂಜಿನ್‌ಗಳು ಮತ್ತು ವಿದ್ಯುತ್ ಪ್ರೊಪಲ್ಷನ್‌ನಂತಹ ಅದ್ಭುತ ತಂತ್ರಜ್ಞಾನಗಳಲ್ಲಿ ವೇಗವಾಗಿ ಮುನ್ನಡೆಯುತ್ತಿದೆ. ಶೀಘ್ರದಲ್ಲೇ ಎಲ್ಲಾ ವಿಜ್ಞಾನಿಗಳ ಕಠಿಣ ಪರಿಶ್ರಮದಿಂದ ಭಾರತವು ಗಗನ ಯಾನದೊಂದಿಗೆ ಮೇಲೇರಲಿದೆ. ಮುಂಬರುವ ದಿನಗಳಲ್ಲಿ ಭಾರತವು ತನ್ನದೇ ಆದ ಬಾಹ್ಯಾ ಕಾಶ ನಿಲ್ದಾಣವನ್ನು ನಿರ್ಮಿಸಲಿದೆ ಎಂದು ತಿಳಿಸಿದರು.



# ಮನೆಗೆ ನುಗ್ಗಿ 1 ಕೆಜಿ ಚಿನ್ನ, 15 ಲಕ್ಷ ರೂ. ಕಳವು

• ಪ್ರಜೋದಯ ವರದಿ

**ಹಾಸನ:** ಮನೆಯಲ್ಲಿ ಯಾರು ಇಲ್ಲದ ವೇಳೆ ಬಾಗಿಲು ಮುರಿದು ಒಳ ನುಗ್ಗಿರುವ ಕಳ್ಳರು ಬರೋಬ್ಬರಿ ಒಂದು ಕೆಜಿ ಚಿನ್ನ, 15 ಲಕ್ಷಕ್ಕೂ ಹೆಚ್ಚು ನಗದನ್ನು ದೋಚಿ ಪರಾರಿಯಾಗಿರುವ ಘಟನೆ ನಗರದ ಸದಾಶಿವ ನಗರದ ಮನೆಯಲ್ಲಿ ನಡೆದಿದೆ.

ಖಾಸಗಿ ಬ್ಯಾಂಕ್ ಉದ್ಯೋಗಿಯಾಗಿರುವ ನವೀನ್ ಎಂಬುವವರ ಮನೆಯಲ್ಲಿ ಈ ಕೃತ್ಯ ನಡೆದಿದೆ. ವರ ಮಹಾಲಕ್ಷ್ಮಿ ಹಬ್ಬಕ್ಕೆಂದು ಬ್ಯಾಂಕ್ ಲಾಕರ್‌ನಿಂದ ಕೋಟ್ಯಾಂತರ ರೂ. ಬೆಲೆ ಬಾಳುವ ಚಿನ್ನ, ಬೆಳ್ಳಿ ಆಭರಣಗಳನ್ನು ಮನೆಗೆ ತರಲಾಗಿತ್ತು. ಗುರುವಾರ ರಾತ್ರಿ ಮನೆಗೆ ಬೀಗ ಹಾಕಿ ಇಡೀ ಕುಟುಂಬ ಹೊರ ಹೋಗಿತ್ತು. ಶನಿವಾರ ಬೆಳಿಗ್ಗೆ 8 ಗಂಟೆಗೆ ಮನೆಗೆ ಬಂದು ನೋಡಿದಾಗ ಕಳ್ಳತನ ನಡೆದಿರುವುದು ಗೊತ್ತಾಗಿದೆ.

ನವೀನ್ ಅವರು ಪತ್ನಿಯ ತಾಯಿಯ ಮನೆಯಲ್ಲೇ ಕುಟುಂಬ ಸಮೇತರಾಗಿ ವಾಸವಾಗಿದ್ದರು. ತಾವು ವಾಸವಿದ್ದ ಮನೆಯ ಎದುರಿನಲ್ಲೇ ನವೀನ್ ಹೊಸ ಮನೆ ನಿರ್ಮಾಣ ಮಾಡುತ್ತಿದ್ದಾರೆ. ಮನೆ ಕಾಮಗಾರಿಗೆಂದು 15 ಲಕ್ಷ ರೂ. ಹಣವನ್ನು ಮನೆಯಲ್ಲಿ ಇಟ್ಟಿದ್ದರು. ಈ ನಡುವೆ ಮನೆಯಲ್ಲಿ ಯಾರೂ ಇಲ್ಲದ್ದನ್ನು ಗಮನಿಸಿದ ಕಳ್ಳರು ಚಿನ್ನಾಭರಣ, ನಗದು ದೋಚಿ ಪರಾರಿಯಾಗಿದ್ದಾರೆ. ಈ ಸಂಬಂಧ ಪೆನ್ಷನ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಪೊಲೀಸರು, ಶ್ವಾನದಳ, ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ದೊಡ್ಡ ಪ್ರಮಾಣದ ಚಿನ್ನಾಭರಣ ಕಳೆದುಕೊಂಡು ಕುಟುಂಬ ಕಣ್ಣೀರಿಡುತ್ತಿದೆ. ಖದೀಮರ ಪತ್ತೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ ಅವರು ವಿಶೇಷ ತನಿಖಾ ತಂಡ ರಚನೆ ಮಾಡಿದ್ದು, ಆರೋಪಿಗಳ ಪತ್ತೆಗೆ ಖಾಕಿ ಪಡೆ ಬಲೆ ಬೀಸಿದೆ.



### ಡಾ.ಸೂರಜ್ ರೇವಣ್ಣ ಹಿಂದೆ ಸರಿಯುವ ಸಾಧ್ಯತೆ: ಪಕ್ಷ ಬಲಪಡಿಸುವವರಿಗೆ ಅಧ್ಯಕ್ಷಪಟ್ಟ?

# ಹೆಚ್‌ಡಿಸಿಸಿ ಅಧ್ಯಕ್ಷ ಗಾದಿ ಕುತೂಹಲ: ರೇವಣ್ಣ ತೀರ್ಮಾನದತ್ತ ಚಿತ್ತ

• ಪ್ರಜೋದಯ ವರದಿ

**ಹಾಸನ:** ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಹೆಚ್‌ಡಿಸಿಸಿ) ಅಧ್ಯಕ್ಷ ಸ್ಥಾನ ಯಾರಿಗೆ ಒಲಿಯಲಿದೆ ಎಂಬುದು ತೀವ್ರ ಕುತೂಹಲ ಮೂಡಿಸಿದೆ. ಜಿಲ್ಲೆಯಲ್ಲಿ ಜೆಡಿಎಸ್ ಬಲಪಡಿಸು ವವರಿಗೆ ಅಧ್ಯಕ್ಷ ಪಟ್ಟ ಸಿಗಲಿದೆಯೇ ಎಂಬ ನಿರೀಕ್ಷೆಯೊಂದು ಹುಟ್ಟುಕೊಂಡಿದೆ.

ಆ.29ರಂದು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದ್ದು, ಜೆಡಿಎಸ್ ತನ್ನ ಸಂಪೂರ್ಣ ಹಿಡಿತವನ್ನು ಸಾಧಿಸಿರುವ ಹಿನ್ನಲೆ ಅಂತಿಮವಾಗಿ ಅಧ್ಯಕ್ಷರು ಯಾರಾಗಬೇಕೆಂಬ ನಿರ್ಧಾರವನ್ನು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ತೆಗೆದುಕೊಳ್ಳಲಿ ರುವುದರಿಂದ ಯಾರಿಗೆ ಅಧ್ಯಕ್ಷಗಾದಿ ದಕ್ಕಲಿದೆ ಎಂಬುದು ರೇವಣ್ಣ ಅವರ ಕೃಪಾಶೀರ್ವಾದ ತೀರ್ಮಾನಿಸಲಿದೆ.

**ಜೆಡಿಎಸ್ ಸಂಪೂರ್ಣ ಪ್ರಾಬಲ್ಯ**

13 ನಿರ್ದೇಶಕ ಸ್ಥಾನಗಳ ಪೈಕಿ 12 ಸ್ಥಾನಗಳಿಗೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದ ಒಂದು ಸ್ಥಾನಕ್ಕೆ ಗುರುವಾರ ನಡೆದ ಚುನಾವಣೆ ಯಲ್ಲಿ ಗಿರೀಶ್ ಚನ್ನವೀರಪ್ಪ ಅವರು 37 ಮತಗಳನ್ನು ಪಡೆದು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಮಟ್ಟನವಿಲೆ ರುದ್ರೇಶ್ ವಿರುದ್ಧ ಭರ್ಜರಿ ಜಯ ಸಾಧಿಸಿದರು. ಹೀಗಾಗಿ, ಆಡಳಿತ ಮಂಡಳಿಯ ಎಲ್ಲಾ 13 ಸ್ಥಾನಗಳ ಮೇಲೂ ಜೆಡಿಎಸ್ ಹಿಡಿತ ಸಾಧಿಸಿದೆ. ಹೀಗಾಗಿ ಜೆಡಿಎಸ್ ವರಿಷ್ಠರ ತೀರ್ಮಾನದಂತೆ ಅಧ್ಯಕ್ಷರ ಆಯ್ಕೆ ನಡೆಯಲಿದೆ.

**ಹಿಂದೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು**

ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಸ್ಥಾನವನ್ನು ಶ್ರವಣಬೆಳಗೊಳ ಕ್ಷೇತ್ರದ ಶಾಸಕ ಸಿ.ಎನ್.ಬಾಲಕೃಷ್ಣ, ಅರಕಲಗೂಡು ತಾಲ್ಲೂಕಿನ ಹೊನ್ನವಳ್ಳಿ ಸತೀಶ್ ಮತ್ತು ಸೋಮನ ಹಳ್ಳಿ ನಾಗರಾಜು ಅವರು ಈ ಹಿಂದೆ ಅಲಂಕರಿಸಿದ್ದರು. » ನಾಲ್ಕನೇ ಪುಟದಲ್ಲಿ



### ಹೆಚ್ಚು ಬಾರಿ ಗೆದ್ದು ಆಕಾಂಕ್ಷಿ ಸ್ಥಾನದಲ್ಲಿರುವವರು

ಆಲೂರು-ಸಕಲೇಶಪುರ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾಗಿರುವ ಕಬ್ಬಿನಹಳ್ಳಿ ಜಗದೀಶ್ ಅವರು ಇದುವರೆಗೂ ಒಟ್ಟು ನಾಲ್ಕು ಬಾರಿ ನಿರ್ದೇಶಕರಾಗಿದ್ದಾರೆ. ಸದ್ಯಕ್ಕೆ ಅವರೇ ಹೆಚ್ಚು ಬಾರಿ ಆಯ್ಕೆಯಾದವರಾಗಿದ್ದು, ಹೀಗಾಗಿ ಅಧ್ಯಕ್ಷ ಸ್ಥಾನ ಕೇಳುವ ನಿರೀಕ್ಷೆಯಲ್ಲಿದ್ದಾರೆ. ಇನ್ನು ಬೇಲೂರು ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಕ್ಷೇತ್ರದಿಂದ ಆಯ್ಕೆಯಾ ಗಿರುವ ಮಾಜಿ ಉಪಾಧ್ಯಕ್ಷ, ಹಾಲಿ ನಿರ್ದೇಶಕ ಎಂ.ಎನ್.ನಾಗರಾಜು ಅವರು 3ನೇ ಬಾರಿಗೆ ಆಯ್ಕೆಯಾಗಿರುವುದರಿಂದ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ಅದೇ ರೀತಿ ಸಗಟು ಮಾರಾಟ ಮಳಿಗೆಗಳು ಹಾಗು ಇತರೆ ಸಹಕಾರ ಸಂಘಗಳ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾಗಿರುವ ಬಿದರಿಕೆರೆ ಜಯರಾಮ್ ಹಾಗು ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳು ಹಾಗು ಪಟ್ಟಣ ಸಹಕಾರ ಬ್ಯಾಂಕುಗಳ ಕ್ಷೇತ್ರದಿಂದ ಚುನಾಯಿತರಾಗಿರುವ ಗಿರೀಶ್ ಚನ್ನವೀರಪ್ಪ ಅವರು ಕೂಡ ತಲಾ ಮೂರು ಬಾರಿ ಆಯ್ಕೆಯಾಗಿದ್ದಾರೆ.

# ಭಾವ ಲಹರಿ

# ಮಕ್ಕಳೇ ಮಣ್ಣು ಹೊತ್ತ ಆಟದ ಮೈದಾನ!

**ಗದ್ದೆ ಬಯಲು, ಹಾಡಿ, ಹಕ್ಕಲುಗಳ ನಡುವೆಯಿದ್ದ ನಮ್ಮ ಮನೆಯಿಂದ, ಬಸ್ ರಸ್ತೆ ತಲುಪಲು ಅನಿವಾ ರ್ಯವಾಗಿ 2 ಕಿ.ಮೀ. ನಡೆಯಲೇಬೇಕಿತ್ತು. ನಂತರ ಅಲ್ಲಿಂದ 3 ಕಿ.ಮೀ. ದೂರದಲ್ಲಿ ಹೈಸ್ಕೂಲು. ಮನೆಯಿಂದ ಆ ಹೈಸ್ಕೂಲಿಗೆ ಇದ್ದ 5 ಕಿ.ಮೀ. ಕ್ರಮಿಸಲು ನಮಗೆ ಒಂದರಿಂದ ಒಂದೂವರೆ ಗಂಟೆ ಕಾಲ ಬೇಕಿತ್ತು. ಮಕ್ಕಳಿಗಿಂತಲೂ ಮುಂಚೆ ಮನೆಯ ಹಿರಿಯರು ಎದ್ದು, ಶಾಲೆಗೆ ಹೋಗುವವರಿಗೆ ಸಿದ್ಧತೆ ನಡೆಸಬೇಕಿತ್ತು!**

ನೀವು ಏನೇ ಹೇಳಿ, ಗ್ರಾಮೀಣ ಬದುಕಿನಲ್ಲಿ ಕಷ್ಟಗಳು ಇದ್ದರೂ, ಅಲ್ಲಿನ ಅನುಭವ ವೈವಿಧ್ಯಕ್ಕೆ ಸಾಟಿಯೇ ಇಲ್ಲ! ಉದಾಹರಣೆಗೆ ಹೇಳುವುದಾದರೆ, ನಾನು ಓದಿದ ಹೈಸ್ಕೂಲು ಇದ್ದದ್ದು ಕಾಡಿನ ಅಂಚಿನ ಒಂದು ಗುಡ್ಡದ ಬದಿಯಲ್ಲಿ. ಮುಖ್ಯರಸ್ತೆಗೆ ಹೊಂದಿಕೊಂಡಿದ್ದ ಹೈಸ್ಕೂಲು ವಿದ್ಯಾಭ್ಯಾಸವೆಂದರೆ, ಹಲವು ಅನುಭವ ವೈವಿಧ್ಯದ ಆಗರ!

ಆ ಹೈಸ್ಕೂಲನ್ನು ತಲುಪಲು ಪ್ರತಿದಿನ ಬೆಳಗ್ಗೆ 5 ಕಿ.ಮೀ., ಸಂಜೆ 5 ಕಿ.ಮೀ. ಕ್ರಮಿಸುವ ಅನುಭವ ಮಾತ್ರ ತುಸು ಶ್ರಮದಾಯಕ, ತುಸು ಸಂತಸಭರಿತ. ಅದರಲ್ಲಿ ಅರ್ಧ ದೂರ ಅನಿವಾರ್ಯವಾಗಿ ನಡಿಗೆ, ಇನ್ನರ್ಧ ದೂರ ಒಮ್ಮೊಮ್ಮೆ ಬಸ್ ಪಯಣ, ಕೆಲವೊಮ್ಮೆ ಅದೂ ನಡಿಗೆಯಲ್ಲೇ!

ಗದ್ದೆ ಬಯಲು, ಹಾಡಿ, ಹಕ್ಕಲುಗಳ ನಡುವೆಯಿದ್ದ ನಮ್ಮ ಮನೆಯಿಂದ, ಬಸ್ ರಸ್ತೆ ತಲುಪಲು ಅನಿವಾ ರ್ಯವಾಗಿ 2 ಕಿ.ಮೀ. ನಡೆಯಲೇಬೇಕಿತ್ತು. ನಂತರ ಅಲ್ಲಿಂದ 3 ಕಿ.ಮೀ. ದೂರದಲ್ಲಿ ಹೈಸ್ಕೂಲು. ಮನೆಯಿಂದ ಆ ಹೈಸ್ಕೂಲಿಗೆ ಇದ್ದ 5 ಕಿ.ಮೀ. ಕ್ರಮಿಸಲು ನಮಗೆ ಒಂದರಿಂದ ಒಂದೂವರೆ ಗಂಟೆ ಕಾಲ ಬೇಕಿತ್ತು. ಮಕ್ಕಳಿಗಿಂತಲೂ ಮುಂಚೆ ಮನೆಯ ಹಿರಿಯರು ಎದ್ದು, ಶಾಲೆಗೆ ಹೋಗುವವರಿಗೆ ಸಿದ್ಧತೆ ನಡೆಸಬೇಕಿತ್ತು!

ನಮ್ಮಮ್ಮ ತಯಾರಿಸಿ ಕೊಟ್ಟ ಗಂಜಿಯನ್ನು ಪುಟಾಣಿ ಬುತ್ತಿಪಾತ್ರೆಗೆ ತುಂಬಿಸಿಕೊಂಡು, ನಡೆದು ಬಸ್‌ಸ್ಟಾಪ್ ಬಳಿಗೆ 8.30ರ ಮುಂಚೆ ಬಂದರೆ, ಜಗದೀಶ್ವರ ಎಂಬ ಬಸ್ ಸಿಗುತ್ತಿತ್ತು. ಆ ಬಸ್ 8.45ರ ಮುಂಚೆ ನಮ್ಮನ್ನು ಹೈಸ್ಕೂಲಿನ ಬಳಿ ಬಿಡುತ್ತಿತ್ತು. ಸಕಾಲಕ್ಕೆ ಬೇರೆ ಬಸ್‌ಗಳಿರಲಿಲ್ಲ. ಅಷ್ಟು ಬೇಗನೆ ಹೋಗುವುದು ಏಕೆ ಎಂದು, ಹೆಚ್ಚಿನ ದಿನ ನಡೆದುಕೊಂಡೇ ಹೈಸ್ಕೂಲಿಗೆ ಹೋಗುತ್ತಿದ್ದೆ. ಇತರ ಸಹಪಾಠಿಗಳು ಜತೆಯಾಗುತ್ತಿದ್ದರು. ಮೊದಲ 2 ಕಿ.ಮೀ., ಗದ್ದೆ ಬೈಲು, ಕಾಡು ಗುಡ್ಡದ ದಾರಿ, ನಂತರದ 3 ಕಿ.ಮೀ. ರಸ್ತೆ ದಾರಿ.

ನಮ್ಮ ಹೈಸ್ಕೂಲು ಇದ್ದ ಹಳ್ಳಿಯ ಮೂಲಹೆಸರು ಗೋಳಿಕಟ್ಟೆ. ಪುರಾತನ ಕಾಲದಲ್ಲಿ ಅಲ್ಲೊಂದು ಗೋಳಿ ಮರ ಮತ್ತು ಅದಕ್ಕೊಂದೇ ಒಂದು ಕಟ್ಟೆ ಇತ್ತು ಎನಿಸುತ್ತದೆ. ನಾಲ್ಕು ರಸ್ತೆ ಕೂಡುವ ತಾಣ ಅದು. ಈ ನಡುವೆ, ಅಲ್ಲೇ ಇದ್ದ ಪುರಾತನ ಕಾಲದ ಶಂಕರನಾರಾಯಣ ದೇವಾಲಯವು ಪ್ರಸಿದ್ಧಿಗೆ ಬಂತು.

ಆದ್ದರಿಂದ ಆ ಹಳ್ಳಿಯನ್ನು ದೇವರ ಹೆಸರಿನಲ್ಲಿ ಅಂದರೆ ಶಂಕರನಾರಾಯಣ ಎಂದು ಕರೆಯ ತೊಡಗಿದರು! ದೇವರ ಹೆಸರು, ವ್ಯಕ್ತಿಯ ಹೆಸರು ಒಂದು ಹಳ್ಳಿಯ ಹೆಸರಾಗಿದೆ ಎಂಬ ಕ್ವಿಜ್ ಪ್ರಶ್ನೆಗೆ ಈ ಊರು ಸೂಕ್ತ! ಬೆಳಗ್ಗೆ ಶಾಲೆಗೆ ಅನುಕೂಲವಾದ ಸಮಯಕ್ಕೆ ಬಸ್ ಇರಲಿಲ್ಲವೆಂದೋ, ಆಗ ಎಲ್ಲರೂ ಅನುಸರಿಸುತ್ತಿದ್ದ ಮಿತವ್ಯಯದ ಆಚರಣೆಯಿಂದಲೋ ಏನೋ, ನಾವು ಹಲವರು ಮಕ್ಕಳು ರಸ್ತೆಯ ಮೇಲೆ ನಡೆಯುತ್ತಾ ಹೋಗಿ ಹೈಸ್ಕೂಲು ತಲುಪುತ್ತಿದ್ದೆವು.

ಎಷ್ಟೋ ದಿನ ಸಂಜೆ ವಾಪಸ್ ಬರುವಾಗಲೂ 5 ಕಿ.ಮೀ. ನಡೆದೇ ಮನೆ ಸೇರಿದ್ದುಂಟು. ಆಗ ಬಸ್ ಚಾರ್ಜ್ 35 ಪೈಸೆ. ಅದನ್ನು ಉಳಿಸಲು ಈ ರಸ್ತೆ ಚಾರಣ ಎನ್ನಬಹುದಾದರೂ, ಆ ದಾರಿಯ ಸೌಂದರ್ಯಕ್ಕೆ, ಸೌಕರ್ಯಕ್ಕೆ ಮನಸೋತು ನಡೆದಿದ್ದೇವೆ ಎಂದು ಈಗ ಹೇಳಿದರೂ, ಒಪ್ಪಬಹುದು. ಏಕೆಂದರೆ, ದಾರಿಯುದ್ದಕ್ಕೂ ಹಸಿರಿನ ಸಿರಿ. ಜತೆಗೆ ನಡೆದು ವಾಪಸ್ ಬರುವಾಗಲೂ, ಮನೆ ತಲುಪುವಾಗ ಸಂಜೆಗತ್ತಲಾದರೂ, ಯಾರಿಗೂ ಯಾವುದೇ ರೀತಿಯ ಭಯವಿರಲಿಲ್ಲ.

ಅದೆಷ್ಟೋ ಬಾರಿ ಹುಡುಗರು, ಹುಡುಗಿಯರು ಒಬ್ಬೊಬ್ಬರೇ ನಡೆದು ಬರುತ್ತಿದ್ದುದೂ ಉಂಟು. ಅಲ್ಲಲ್ಲಿ ಸಿಗುವ ಮನೆಯವರ ಸಹಕಾರವು ಪರೋಕ್ಷ ಧೈರ್ಯ ನೀಡುತ್ತಿತ್ತು. ದಾರಿಯ ನಡುವೆ ಬಾಯಾರಿದರೆ, ಯಾರ ಮನೆಗೆ ಹೋದರೂ, ಕುಡಿಯಲು ಬೆಲ್ಲ ನೀರು ಕೊಡುತ್ತಿದ್ದರು.

ಕಬ್ಬಿನಾಲೆಯ ಸಮಯದಲ್ಲಿ ಎಲ್ಲರಿಗೂ ಕುಡಿಯಲು ಕಬ್ಬಿನ ಹಾಲು, ತಿನ್ನಲು ಕಬ್ಬಿನ ಕೋಲು! ನಡೆದು ಮನೆ ಸೇರುವಾಗ ಕತ್ತಲಾದರೂ, ದಾರಿಯಲ್ಲಿ ಮನುಷ್ಯರಿಂದ ಭಯ, ಶೋಷಣೆ ಇರಲಿಲ್ಲ. ಹುಲಿ, ಚಿರತೆ ಕಾಟ ಇರಲಿಲ್ಲ. ಆದ್ದರಿಂದಲೇ ಆ ನಡಿಗೆಯ ಅನುಭವ ಅನುಪಮ. ಮಳೆಗಾಲದಲ್ಲಿ ನಮ್ಮ ಮನೆಯಿಂದ ಹೈಸ್ಕೂಲಿಗೆ ನಡೆದು ಹೊರಟರೆ, ಮೊದಲಿನ ಅರ್ಧ ಕಿ.ಮೀ. ದೂರ ತುಸು ರಗಳೆಯೇ ಸರಿ.

ಒಂದು ಕೈಯಲ್ಲಿ ಕೊಡೆ, ಇನ್ನೊಂದು ಕೈಯಲ್ಲಿ ಬುತ್ತಿಪಾತ್ರೆ ಹಿಡಿದು ಆ ಬೈಲನ್ನು ದಾಟುವುದು ಸಣ್ಣ ಸಾಹಸ. ಮಳೆ ಸುರಿಯವಾಗ, ಕೊಡೆ ಹಿಡಿದು ಗದ್ದೆಯಂಚಿನ ಮೇಲೆ ನಡಿಗೆ, ಎರಡೂ ಕಡೆ ಭತ್ತ ಬೆಳೆದ ಗದ್ದೆ, ಅದರಾಚೆ ನೀರು ಹರಿಯುವ ತೋಡು, ಆ ತೋಡನ್ನು ದಾಟಲು ಮರದ ಸಾರ, ಅದನ್ನು ದಾಟಿ, ಹಾಡಿಯ ದಾರಿ ಹಿಡಿದು ಅರ್ಧ ಗಂಟೆ ನಡೆದಾಗ ನಮ್ಮೂರಿನ ಬಸ್‌ಸ್ಟಾಪ್ ಸಿಗುತ್ತಿತ್ತು.

ಅಲ್ಲಿಂದಾಚೆ ಹೆಚ್ಚಿನ ದಿನ ರಸ್ತೆಯ ಮೇಲೆ ನಡೆಯುವ ಕೆಲಸ. ನಮ್ಮೂರಿನ ಹತ್ತಿರವೇ ವಾರಾಹಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಹೊಸ ಸೇತುವೆಯ ಮೇಲೆ ನಡೆಯುವಾಗ, ಕೆಳಗೆ ಹರಿಯುವ ನೀರನ್ನು ನೋಡುವ ಆಸೆ. ಮಳೆಗಾಲದಲ್ಲಾದರೆ, ಆ ನದಿಯಲ್ಲಿ ಹರಿಯುವ ಕೆಂಪನೆಯ ನೀರು, ಅದರಲ್ಲಿ ಒಮ್ಮೊಮ್ಮೆ ತೇಲಿಬರುವ ಬೃಹತ್ ಗಾತ್ರದ ಮರಗಳು! ಚಳಿಗಾಲದಲ್ಲಿ ಆ ನದಿಯ ತಿಳಿಯಾದ ನೀರಿನಲ್ಲಿ ಓಡಾಡುವ ಗೊದಮೊಟ್ಟೆಗಳ ಹಿಂಡು, ಮೀನುಗಳ ದಂಡು ಕಾಣಸಿಗುತ್ತಿತ್ತು.

ಸೇತುವೆ ದಾಟಿದ ನಂತರ, ರಸ್ತೆಯ ಇಕ್ಕೆಲದಲ್ಲೂ ಹಾಡಿ, ಕಾಡು, ಅಲ್ಲಲ್ಲಿ ಗುಡ್ಡ. ಬೇಸಗೆ ಹತ್ತಿರ ಬರುತ್ತಿದ್ದಂತೆ, ದಾರಿಯ ತುಸು ಒಳಭಾಗದಲ್ಲಿ ಕುರುಚಲು ಗಿಡಗಳ ನಡುವೆ ಬೆಳೆದ ಚೇಂಪಿ ಹಣ್ಣು ತಿನ್ನುವ ಅವಕಾಶ. ಚೇಂಪಿ ಹಣ್ಣು ರುಚಿ ಮತ್ತು ಗಾತ್ರದಲ್ಲಿ ದ್ರಾಕ್ಷಿಯನ್ನು ಹೋಲುತ್ತದೆ. ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಹಣ್ಣುಗಳು ತಿನ್ನಲು ಸಿಗುತ್ತಿದ್ದುದು ಒಂದು ಸೋಜಿಗವೇ!

ಗರ್ಚನ ಹಣ್ಣು, ಬೆಳಮಾರ ಹಣ್ಣು, ಕಾಟುಮಾವಿನ ಹಣ್ಣುಗಳು, ನೇರಳೆ ಹಣ್ಣು, ಸಳ್ಳೆ ಹಣ್ಣುಗಳು ಮಕ್ಕಳಿಗೆ ಬಲು ಇಷ್ಟ. ನಾವು ನಡೆಯುವ ಟಾರುರಸ್ತೆಯ ಮೇಲೆ ಅಲ್ಲಲ್ಲಿ ಕಪ್ಪೆಗಳ ಕಳೇಬರ! ರಾತ್ರಿ ಹೊತ್ತಿನಲ್ಲೋ ಏನೊ, ವೇಗವಾಗಿ ಸಾಗುವ ಲಾರಿಗಳ ಚಕ್ರಕ್ಕೆ ಸಿಕ್ಕಿದ ಅಬ್ಬೆಪಾರಿ ಕಪ್ಪೆಗಳ ಪಾಡು ಅದು. ಅದೇ ರಸ್ತೆಯಲ್ಲಿ ನಡೆದು, ಕಲ್ಕುಟುಕನ ದೇವಾಲಯದ ಬಳಿ ದಟ್ಟ ಹಾಡಿದಾರಿಯಲ್ಲಿ ಬಲಕ್ಕೆ ಸಾಗಿ ಮುಂದುವರಿದರೆ, ಹೈಸ್ಕೂಲು ಸಿಗುತ್ತದೆ. ಈಗ ಆ ಕಲ್ಕುಟಕನ ಹಾಡಿ ಸಂಪೂರ್ಣ ನಾಶವಾಗಿಬಿಟ್ಟಿದೆ; ಜೆಸಿಬಿಗಳು ಆ ಜಾಗವನ್ನು ಮಟ್ಟಸ ಮಾಡಿವೆ.

ದಿನಾ ಈ ಟಾರ್‌ರಸ್ತೆಯ ಮೇಲೆ ನಡೆಯಲು ಬೋರ್ ಎನಿಸಿದರೆ, ಒಂದು ಒಳದಾರಿಯಿತ್ತು. ಕಟ್ಟೆ ಮಕ್ಕಿ ಉಬ್ಬು ಏರಿದ ನಂತರ, ತುಸು ದೂರದಲ್ಲಿ ಎಡಭಾಗದ ಹಕ್ಕಲಿನೊಳಗೆ ಸಾಗುವ ದಾರಿಯಲ್ಲಿ ನಡೆದರೆ, ಇನ್ನಷ್ಟು ನಿರ್ಜನ ಎನಿಸುವ ಕಾಡುದಾರಿ. ಅದರಾಚೆ ಒಂದು ಗದ್ದೆಬೈಲು, ತೋಡು, ಸಂಕ. ಅಲ್ಲಿಂದಾಚೆ ಮತ್ತೊಂದು ಗುಡ್ಡ. ಅದನ್ನೇರಿ ಇಳಿದರೆ, ಶಂಕರನಾರಾಯಣ ದೇವಾಲಯದ ಹಿಂಭಾಗದಲ್ಲಿ, ಐತಾಳರ ಮನೆಯ ಹತ್ತಿರ ಸೌಡ ರಸ್ತೆಯನ್ನು ತಲುಪಬಹುದು. ಅಲ್ಲಿಂದ ಮತ್ತೆ ಟಾರುರಸ್ತೆಯಲ್ಲಿ ಒಂದು ಕಿ.ಮೀ. ನಡೆದರೆ ನಮ್ಮ ಹೈಸ್ಕೂಲು.

ಈ ಒಳದಾರಿ ಅಷ್ಟೇನೂ ಹತ್ತಿರದ ದಾರಿ ಎನ್ನಲಾಗದು. ಆದರೆ, ಆ ದಾರಿಯುದ್ದಕ್ಕೂ ಸಿಗುವ ಹಾಡಿ, ಹಕ್ಕಲು, ಗದ್ದೆ, ಗುಡ್ಡಗಳಲ್ಲಿ ನಡೆಯುವ ಅನುಭವಕ್ಕೆಂದೇ ನಾವೆಲ್ಲಾ ಅಲ್ಲಿ ನಡೆಯುತ್ತಿದ್ದೆವು ಎನಿಸುತ್ತದೆ. ಚಳಿಗಾಲ ಕಳೆದ ನಂತರ ಆ ದಾರಿಯುದ್ದಕ್ಕೂ ಮಾವಿನ ಮಿಡಿಗಳು ತಿನ್ನಲು ಸಿಗುತ್ತಿದ್ದವು. ಅಲ್ಲಲ್ಲಿ ಕೆಲವರು ಕಬ್ಬಿನಾಲೆ ಮಾಡುವವರು ಕಬ್ಬು ಕೊಡುತ್ತಿದ್ದರು.

ನಾನೊಮ್ಮೆ ಒಬ್ಬನೇ ಆ ದಾರಿಯಲ್ಲಿ ನಡೆದಾಗ, ಒಂದು ಪುಟಾಣಿ ಹಕ್ಕಿಯ ಗೂಡನ್ನು ಕಂಡ ನೆನಪಿದೆ. ಗದ್ದೆಯಂಚಿನ ತೋಡಿನ ಪಕ್ಕದ ಮುಂಡುಕದ ಮುಳ್ಳು ಎಲೆಗಳ ನಡುವೆ ಆ ಸಣ್ಣ ಹಕ್ಕಿ ಗೂಡು ಕಟ್ಟಿತ್ತು. 5 ಅಡಿ ಎತ್ತರದಲ್ಲಿ ಇದ್ದ ಆ ಗೂಡು, ಟ್ಯೂಬ್ ಆಕಾರದಲ್ಲಿತ್ತು. ಪೂರ್ತಿ ಎಲೆಗಳಿಂದಲೇ ನಿರ್ಮಾಣ. ಆ ಹಕ್ಕಿಯ ಹೆಸರು ಗೊತ್ತಿರಲಿಲ್ಲ. ನಾನು ಗೂಡನ್ನು ನೋಡುತ್ತಾ ನಿಂತಾಗ, ಆ ಹಕ್ಕಿಯು ಬೆದರಿ ಹಾರಿಹೋಗಿದ್ದು ನೆನಪಿದೆ.

ಓ, ನಾವೆಲ್ಲಾ ಈ ರೀತಿ ಹತ್ತಿರದಿಂದ ಅದನ್ನು ನೋಡಿದರೆ ಅದಕ್ಕೆ ತೊಂದರೆ ಎಂದರಿತ ನಾನು, ಬೇಗ ಬೇಗನೆ ಕಾಲು ಹಾಕಿದೆ. ಹೈಸ್ಕೂಲಿನ ಹಿಂಭಾಗದಲ್ಲಿ ಆರಂಭದಲ್ಲಿ, ಒಂದು ಕುರುಚಲು ಕಾಡಿದೆ. ಆ ನಂತರ ದಟ್ಟವಾದ ಕಾಡು, ಗುಡ್ಡ. ಶಾಲೆಯ ಹಿಂಭಾಗದ ಕುರುಚಲು ಗಿಡಗಳ ಒಂದು ಟೊಂಗೆಯಲ್ಲಿ ಹಕ್ಕಿಯೊಂದು ಕಟ್ಟಿದ್ದ ಗೂಡು ಇಂದಿಗೂ ನೆನಪಿದೆ. ಪಾಪ, ಆ ಹಕ್ಕಿಯು ಮೂರರಿಂದ ನಾಲ್ಕು ಅಡಿಗಳ ಎತ್ತರದಲ್ಲಿ ಗೂಡುಕಟ್ಟಿ ಮೊಟ್ಟೆಯಿಟ್ಟಿತ್ತು.

ಸಾಮಾನ್ಯವಾಗಿ ದರ್ಜಿ ಹಕ್ಕಿಗಳು ಅಷ್ಟು ಕಡಿಮೆ ಎತ್ತರದಲ್ಲಿ ಗೂಡು ಕಟ್ಟುತ್ತವೆ. ಅದೂ ದರ್ಜಿ ಹಕ್ಕಿಯ ಗೂಡು ಇರಬಹುದು. ನಾವು ಮಕ್ಕಳು ಪ್ರತಿದಿನ ಆ ಗೂಡನ್ನು ನೋಡುತ್ತಿದ್ದೆವು. ಹತ್ತಿರದಿಂದ, ತಲೆಬಗ್ಗಿಸಿ, ಮಾತನಾಡುತ್ತಾ ನಾವು ನೋಡುತ್ತಾ ನಿಂತಾಗ, ಆ ಹಕ್ಕಿಗೆ ಅದರಿಂದ ಅದೆಷ್ಟು ಕಿರಿಕಿರಿ ಆಯಿತೋ ಗೊತ್ತಿಲ್ಲ.

ಹೆಚ್ಚಿನ ದಿನ ನಮ್ಮ ಬುತ್ತಿಪಾತ್ರೆಯಲ್ಲಿ ಹಾಕಿಕೊಡುತ್ತಿದ್ದುದು, ಅನ್ನ ಅಥವಾ ಗಂಜಿ, ಅದರ ಜತೆ ಮೊಸರು, ಅದರ ಮೇಲೊಂದು ಉಪ್ಪಿನಕಾಯಿ ಹೋಳು. ಹೈಸ್ಕೂಲು ಸೇರಿದ ಹೊಸತರಲ್ಲಿ, ಮೂರು ಕಂಪಾರ್ಟ್‌ಮೆಂಟ್ ಇರುವ ಪುಟ್ಟ ಬುತ್ತಿಪಾತ್ರೆಯನ್ನು ನಮ್ಮಪ್ಪ ತೆಗೆಸಿಕೊಟ್ಟಿದ್ದರು. ಅದರಲ್ಲಿ ಪ್ರತ್ಯೇಕವಾಗಿ ಉಪ್ಪಿನಕಾಯಿ ಹಾಕಿಕೊಳ್ಳುವ ಅವಕಾಶ.



ಮಳೆಗಾಲದಲ್ಲಿ ನಮ್ಮ ಹೈಸ್ಕೂಲಿನ ಪಕ್ಕದಲ್ಲೇ ಹರಿಯುತ್ತಿದ್ದ ತಿಳಿನೀರಿನ ತೊರೆಯಲ್ಲಿ ಕೈ ತೊಳೆಯುವ, ಬುತ್ತಿಪಾತ್ರೆ ತೊಳೆಯುವ ಪರಿಪಾಠ. ಒಮ್ಮೊಮ್ಮೆ ಬುತ್ತಿಯೂಟ ತಿನ್ನಲು, ಶಾಲೆಯ ಹಿಂಭಾಗದ ಕಾಡಿನತ್ತ ಸಾಗಿದ್ದ

ಗಾಡಿಜಾಡಿನಲ್ಲಿ ಸ್ವಲ್ಪ ದೂರ ನಡೆದು ಹೋಗುತ್ತಿದ್ದೆವು. ಅಲ್ಲಿ ಪುರಾತನ ಕಾಲದ ಹಲವು ಮರಗಳಿದ್ದವು, ಅವುಗಳ ದಪ್ಪನೆಯ ಬೇರು ನಮ್ಮ ಕುರ್ಚಿ, ಇನ್ನೊಂದು ಬೇರು ಟೇಬಲ್.

ಅದೊಂದು ದಟ್ಟ, ಸುಂದರ ಕಾಡು. ಊಟ ಮುಗಿಸಿದಾಗ, ಕೈತೊಳೆಯಲು ಅಲ್ಲೊಂದು ನೀರಿನಾ ಶ್ರಯವಿತ್ತು. ಸುಮಾರು ಹತ್ತು ಅಡಿ ವಿಶಾಲವಿದ್ದ ಆ ನೀರಿನ ಗುಮ್ಮಿಯಲ್ಲಿ ಬೇಸಗೆಯಲ್ಲೂ ನೀರಿರುತ್ತಿತ್ತು. ಅದರ ಸುತ್ತಲೂ ಗಿಡ, ಪೊದೆ, ಬಳ್ಳಿ, ಮರಗಳಿದ್ದುದರಿಂದಲೇ ಇರಬೇಕು, ಅದರ ನೀರು ಒಣಗುತ್ತಿರಲಿಲ್ಲ. ಆದರೆ, ಆ ಗುಮ್ಮಿಗೆ ನಿರಂತರವಾಗಿ ಎಲೆಗಳು ಬೀಳುತ್ತಿದ್ದುದರಿಂದಾಗಿ, ಆ ನೀರನ್ನು ಬಾಯಿಗೆ ಹಾಕಿಕೊಂಡರೆ, ಎಲೆಕೊಳೆತ ರುಚಿ!

ಕೈತೊಳೆಯಲು, ಬುತ್ತಿಪಾತ್ರೆ ತೊಳೆಯಲು ಮಾತ್ರ ಅದರ ಉಪಯೋಗ. ಆ ಸುತ್ತಲೂ ಎಲ್ಲೂ ಮನೆಗಳಿರಲಿಲ್ಲ. ಅದು ಕಾಡುಪ್ರಾಣಿಗಳೇ ಮಾಡಿದ ಗುಮ್ಮಿ ಇರಬಹುದು. ಕಾಡುಪ್ರಾಣಿಗಳ ಉಪಯೋಗಕ್ಕೆ ಸೂಕ್ತವಾಗಿತ್ತು ಆ ಗುಮ್ಮಿಯ ನೀರು.

ಅದೇ ಗುಮ್ಮಿಯ ಪಕ್ಕ ಸಾಗಿದ್ದ ಗಾಡಿಜಾಡಿನಲ್ಲಿ ನಾನು ಮತ್ತು ಸಹಪಾಠಿ ಒಮ್ಮೆ ನಡೆದುಕೊಂಡು ಹೋಗಿದ್ದುಂಟು. ಅವರ ಮನೆಯು ನಮ್ಮ ಮನೆಗಿಂತಲೂ ಹೆಚ್ಚು ದುರ್ಗಮ ಸ್ಥಳದಲ್ಲಿತ್ತು. ಹೈಸ್ಕೂಲಿನ ಹಿಂಭಾಗದ ಆ ದಾರಿಯಲ್ಲಿ 5 ಕಿ.ಮೀ. ನಡೆದರೆ ಅವರ ಊರು ರಟ್ಟಾಡಿ. ಒಂದು ಸಂಜೆಕ್ಲಾಸ್ ಮುಗಿಸಿ, ನಾವಿಬ್ಬರು ಆ ದಾರಿ ಹಿಡಿದೆವು.

ಎಲ್ಲಾ ಕಡೆ ಕಾಡು, ಹಾಡಿ, ಗುಡ್ಡಗಳು! ನಡುನಡುವೆ ಗದ್ದೆಗಳು. ಅವುಗಳ ನಡುವೆ ದಾರಿಗಡ್ಡಲಾಗಿ ವಾರಾಹಿ ಹೊಳೆಯ ಉಪನದಿ! ಅವು ಬೇಸಗೆಯ ದಿನಗಳಾಗಿದ್ದರಿಂದ ನೀರು ಕಡಿಮೆಯಿತ್ತು. ಆ ನೀರಿನಲ್ಲಿ ನಡೆದರೆ ತೊಡೆ ಮಟ್ಟದ ನೀರು. ನಿಧಾನವಾಗಿ, ಜಾಗ್ರತೆಯಿಂದ ಆ ಹರಿಯುವ ನೀರಿನಲ್ಲಿ ನದಿಯನ್ನು ದಾಟುವಾಗ ನನ್ನ ಚಡ್ಡಿಯ ಅಂಚು ತುಸು ಒದ್ದೆಯಾಯಿತು. ಆದರೆ ಸಂಜೆಯ ಇಳಿ ಬಿಸಿಲಿನಲ್ಲಿ, ಆ ವಿಶಾಲ ನದಿಯ ಹರವನ್ನು ಕಾಲ್ನಡಿಗೆಯಲ್ಲೇ ದಾಟಿದ ಅನುಭವ ಮಾತ್ರ ಅಪೂರ್ವ.

ನಮ್ಮ ಹೈಸ್ಕೂಲಿನ ವಿಶೇಷತೆ ಎಂದರೆ, ಮುಂಭಾಗದಲ್ಲೊಂದು ವಿಶಾಲವಾದ ಆಟದ ಮೈದಾನ, ಹಿಂಭಾಗದಲ್ಲಿ ಅದಕ್ಕಿಂತಲೂ ವಿಶಾಲವಾದ ಇನ್ನೊಂದು ಆಟದ ಮೈದಾನ. ಹಿಂಭಾಗದ ಮೈದಾನ ಅದೆಷ್ಟು ವಿಶಾಲವೆಂದರೆ, ಫುಟ್‌ಬಾಲ್ ಆಟ ಆಡುವಷ್ಟು! ಅಲ್ಲಿದ್ದ ಹೆಬ್ಬಾರ್ ಎಂಬ ಪಿ.ಇ.ಟೀಚರ್, ಮಕ್ಕಳ ಸಹಾಯದಿಂದ ಅಷ್ಟು ದೊಡ್ಡ ಆಟದ ಮೈದಾನ ನಿರ್ಮಿಸಿದ್ದರು.

ಸಮಯ ಇದ್ದಾಗಲೆಲ್ಲಾ ಶಾಲಾ ಮಕ್ಕಳು ಗುಡ್ಡವನ್ನು ತರಿದು, ಕೈಗಾಡಿಯಲ್ಲಿ ಮಣ್ಣನ್ನು ತುಂಬಿಕೊಂಡು, ಇಳಿಜಾರಿಗೆ ತುಂಬಿಸುವ ಕೆಲಸ ಮಾಡಿದ್ದರು. ಈ ರೀತಿ ಹಲವು ವರ್ಷ ಮಾಡಿದ್ದರಿಂದ, ಅಷ್ಟು ದೊಡ್ಡ ಮೈದಾನ ಸಿದ್ಧವಾಗಿತ್ತು. ನಾನೂ ಆ ಮೈದಾನ ನಿರ್ಮಿಸಲು, ಮಣ್ಣನ್ನು ಕೈಗಾಡಿಯಲ್ಲಿ ತಳ್ಳಿ ತಂದು ಇಳಿಜಾರಿಗೆ ಹಾಕಿ, ಅಳಿಲುಸೇವೆ ಮಾಡಿದ್ದೆ.


ಆದರೆ, ಅಷ್ಟು ಹೊತ್ತಿಗೆ ಅದಾಗಲೇ, ಹಿಂದಿನ ವಿದ್ಯಾರ್ಥಿಗಳು ಮಣ್ಣು ಹೊತ್ತು, ಮಣ್ಣು ಹೊತ್ತು, ಸಾಕಷ್ಟು ವಿಶಾಲ ಮೈದಾನವನ್ನು ನಿರ್ಮಾಣ ಮಾಡಿದ್ದರು. ಮಕ್ಕಳೆಲ್ಲರೂ ಕ್ರಿಕೆಟ್, ಫುಟ್‌ಬಾಲ್, ಕಬಡ್ಡಿ, ಬಾಲ್‌ಬ್ಯಾಡ್ಮಿಂಟನ್, ವಾಲಿಬಾಲ್, ಥ್ರೋಬಾಲ್, ಖೋಖೋ ಆಡಲು ಪ್ರಶಸ್ತವಾದ ಮೈದಾನವದು!

ಮೈದಾನ ನಿರ್ಮಿಸಲು ನಾನೂ ಒಂದಷ್ಟು ಮಣ್ಣನ್ನು ತರಿದು, ಕೈಗಾಡಿಯಲ್ಲಿ ತಂದು ಒಂದು ಮೂಲೆಯಲ್ಲಿ ರಾಶಿ ಹಾಕಿದ್ದರಿಂದಾಗಿ, ಶಾಲೆಗೆ ಮಣ್ಣು ಹೊತ್ತಿದ್ದು ಎಂಬ ನುಡಿಗಟ್ಟು ಇಲ್ಲಿ ನಿಜವಾಗಿಯೂ ಅನುಭವಕ್ಕೆ ಬಂದಿತ್ತು! ಈಗ ಆ ಹೈಸ್ಕೂಲು ಅಭಿವೃದ್ಧಿ ಕಂಡಿದೆ. ಅಲ್ಲೀಗ ಪ್ರಥಮದರ್ಜೆ ಕಾಲೇಜು ಆರಂಭಗೊಂಡಿದೆ.

**– ಶಶಿಧರ** ಹಾಲಾಡಿ

## ದೇಶದಲ್ಲಿನ ರೇಬಿಸ್ ಸಮಸ್ಯೆಗೆ ಸುಪ್ರೀಂ ತೀರ್ಪು ಪರಿಹಾರವೇ?

**(2ನೇ ಪುಟದಿಂದ ಮುಂದುವರಿದಿದೆ)**




ಲೋಕಸಭೆಯ ಅಧಿವೇಶನದಲ್ಲಿ ಕೇಳಲಾದ ಪ್ರಶ್ನೆಗೆ ಕೇಂದ್ರ ಸರಕಾರ ನೀಡಿದ ಉತ್ತರದಲ್ಲಿದ್ದ ಮಾಹಿತಿಯ ಪ್ರಕಾರ ಭಾರತದಲ್ಲಿ 2024ರಲ್ಲಿ ಕನಿಷ್ಠ 54 ರೇಬಿಸ್ ಸಾವುಗಳು ವರದಿಯಾಗಿವೆ. ಇದೇ ವರ್ಷ ಕರ್ನಾಟಕದಲ್ಲಿಯೇ 42 ಮಂದಿ ರಬಿಸ್‌ನಿಂದ ಮೃತಪಟ್ಟಿದ್ದಾರೆ ಎಂದು ಇನ್ನೊಂದು ವರದಿ ಹೇಳಿದೆ! ಅಂದರೆ ದೇಶದಲ್ಲಿ ಲಭ್ಯವಿರುವ ದಾಖಲೆಗಳ ಪ್ರಕಾರ ರೇಬಿಸ್ ಸಾವುಗಳಲ್ಲಿ ಕರ್ನಾಟಕವೇ ಮುಂದಿದೆ.

2025ರ ಜನವರಿಯಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ಪ್ರಕಟಿಸಿದ ವರದಿ ಯುನ್ವಯು ದೇಶದಲ್ಲಿ ರೇಬಿಸ್‌ನಿಂದ ಪ್ರತಿ ವರ್ಷ ಅಂದಾಜು 5726 ಮಂದಿ ಸಾವನ್ನಪ್ಪುತ್ತಿದ್ದಾರೆ. ಆದರೆ, ಈ ಎಲ್ಲಾ ಸಂಖ್ಯೆಗಳು ನಿಖರವಾಗಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಭಿಪ್ರಾಯಪಟ್ಟಿದೆ. ಅದರ ಪ್ರಕಾರ ಭಾರತ ಜಗತ್ತಿನಲ್ಲಿ ಅತ್ಯಂತ ಹೆಚ್ಚು ರೇಬಿಸ್ ಬಾಧಿತ ದೇಶವಾಗಿದ್ದು, ಜಗತ್ತಿನ ಶೇ.36ರಷ್ಟು ರೇಬಿಸ್ ಸಾವುಗಳು ಭಾರತದ ಸಂಭವಿಸುತ್ತವೆ.

ನಮ್ಮ ದೇಶದಲ್ಲಿ ವರ್ಷಕ್ಕೆ 18000 ದಿಂದ 20000 ಜನರು ರಬಿಸ್‌ಗೆ ಬಲಿಯಾಗುತ್ತಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿಸಿದೆ. ಮೇಲ್ಕಂಡ ಯಾವುದೇ ಅಂಕಿ–ಅಂಶವನ್ನು ಪರಿಗಣಿಸಿದರೂ, ಇರುವ ಸಮಸ್ಯೆ ಗಂಭೀರವಾದುದೇ ಹಾಗೂ ಶೇ.99ರಷ್ಟು ರೇಬಿಸ್‌ಗಳು ನಾಯಿ ಕಡಿತದಿಂದಲೇ ಬರುವಂಥವು ಎನ್ನುವುದು ಕೂಡಾ ನಿಜ.

ರಬಿಸ್ ಎಂಬ ಸೈಲೆಂಟ್ ಕಿಲ್ಲರ್!: ಒಬ್ಬ ವ್ಯಕ್ತಿ ಅಥವಾ ಪ್ರಾಣಿಯನ್ನು ರಬಿಸ್ ಸೋಂಕಿತ ಪ್ರಾಣಿ ಕಚ್ಚಿದಾಗ, ಕಚ್ಚಿದ ಪ್ರಾಣಿಯ ಲಾಲಾರಸದಲ್ಲಿರುವ ರೇಬಿಸ್ ವೈರಸ್ ಗಾಯದ ಮೂಲಕ ದೇಹವನ್ನು ಪ್ರವೇಶಿಸುತ್ತದೆ. ಹೀಗೆ ದೇಹ ಸೇರಿದ ವೈರಸ್ ಕೆಲವು ವಾರಗಳಿಂದ ತಿಂಗಳವರೆಗೆ ಕಚ್ಚಿದ ಜಾಗದಲ್ಲಿನ ಸ್ನಾಯುಗಳಲ್ಲಿ ಹಲವಾರು ಬಾರಿ ದ್ವಿಗುಣಗೊಳ್ಳುತ್ತದೆ.

ನಂತರ ಕಚ್ಚಿದ ಜಾಗದ ಹತ್ತಿರದಲ್ಲಿರುವ ನರಗಳ ತುದಿಗೆ ಅಂಟಿಕೊಂಡು ಬೆನ್ನುಹುರಿಯ ಮೂಲಕ ಕೊನೆಗೆ ಮಿದುಳನ್ನು ತಲುಪುತ್ತವೆ. ಈ ಪ್ರಕ್ರಿಯೆ ನಿಧಾನವಾಗಿ ನಡೆಯುವುದರಿಂದ ರೋಗ ಲಕ್ಷಣಗಳು ಕಾಣಿಸಿಕೊಳ್ಳಲು ದೀರ್ಘ ಸಮಯ ತೆಗೆದುಕೊಳ್ಳುತ್ತದೆ. ಕಚ್ಚಿದ ಜಾಗವು ಮಿದುಳಿಗೆ ಎಷ್ಟು ಹತ್ತಿರವಿದೆ ಎಂಬುದರ ಆಧಾರದ ಮೇಲೆ (ಹತ್ತಿರವಿದ್ದಷ್ಟೂ ಬೇಗ) ಕೆಲವು ವಾರಗಳಿಂದ 3 ತಿಂಗಳ ಒಳಗೆ ರೋಗ ಲಕ್ಷಣಳಾದ ಮಿದುಳಿನ ಉರಿಯೂತ, ನೀರನ್ನು ಕಂಡರೆ ಭಯ (ಹೈಡ್ರೋ ಫೋಬಿಯಾ), ಗೊಂದಲ, ಆಕ್ರಮಣಕಾರಿ ನಡವಳಿಕೆ, ಹೆಚ್ಚು ಲಾಲಾರಸದ ಉತ್ಪತ್ತಿ ಮತ್ತು ಪಾರ್ಶ್ವ ವಾಯು ಮುಂತಾದ ತೀವ್ರವಾದ ನರರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಸೋಂಕಿತ ಪ್ರಾಣಿಗಳಿಂದ ಕಡಿತಕ್ಕೊಳಗಾದ ತಕ್ಷಣವೇ ಲಸಿಕೆ ಪಡೆದಲ್ಲಿ ಮಿದುಳನ್ನು ವೈರಸ್ ತಲುಪದಂತೆ ತಡೆಯಬಹುದು. ಹಾಗಾಗಿಯೇ ಯಾವುದೇ ಪ್ರಾಣಿ ಕಡಿದ ನಂತರ ತಕ್ಷಣವೇ ವೈದ್ಯರನ್ನು ಕಾಣುವುದು ಅತ್ಯವಶ್ಯಕ. ಆದರೆ, ಒಮ್ಮೆ ರೋಗ ಲಕ್ಷಣಗಳು ಕಾಣಿಸಿಕೊಂಡವು ಎಂದರೆ ಅಂಥ ಪ್ರಕರಣಗಳಲ್ಲಿ ಸಾವು ಖಚಿತವಾಗಿರುತ್ತದೆ.

ಸವಾಲುಗಳು: ಮೇಲಿನ ಅಂಕಿ–ಅಂಶಗಳನ್ನು ಪರಿಗಣಿಸಿ ಹೇಳುವುದಾದರೆ ಸುಪ್ರೀಂ ಕೋರ್ಟಿನ ಆದೇಶದ ಹಿಂದೆ ಒಂದು ಉತ್ತಮವಾದ ಉದ್ದೇಶವಂತೂ ಖಂಡಿತಾ ಇದೆ. ಆದರೆ, ಅದರ ಜತೆಗೆ ಆದೇಶದ ಅನುಷ್ಠಾನದಲ್ಲಿ ಎದುರಾಗುವ ಸವಾಲುಗಳು ಕೂಡಾ ದೊಡ್ಡ ಮಟ್ಟದ್ದೇ ಆಗಿವೆ. ಈ ಆದೇಶವನ್ನು ಜಾರಿಗೊಳಿಸಲು ವ್ಯಾಪಕ ಮೂಲಸೌಕರ್ಯ ಮತ್ತು ಸಂಪನ್ಮೂಲಗಳ ಅವಶ್ಯಕತೆಯಿದೆ. ದೆಹಲಿ ಮುನಿಸಿಪಲ್ ಕಾರ್ಪೊರೇಷನ್‌ನ ಅಂಕಿ–ಅಂಶದ ಅನುಸಾರ ಅಲ್ಲಿರುವ ಬೀದಿ ನಾಯಿಗಳ ಒಟ್ಟು ಸಂಖ್ಯೆ ಅಂದಾಜು 10 ಲಕ್ಷ!

ಇಡೀ ದೇಶದಲ್ಲಿನ ಬೀದಿನಾಯಿಗಳ ಸಂಖ್ಯೆ ಸುಮಾರು 6 ಕೋಟಿಗೂ ಹೆಚ್ಚು! ಆದರೆ, ದೆಹಲಿಯಲ್ಲಿ ಪ್ರಸ್ತುತವಿರುವ 20 ಪ್ರಾಣಿ ಜನ್ಮ ನಿಯಂತ್ರಣ ಕೇಂದ್ರಗಳಲ್ಲಿ ಕೇವಲ 2500 ನಾಯಿಗಳಿಗೆ ಮಾತ್ರ ಆಶ್ರಯ ನೀಡಬಹುದಾಗಿದೆ. ಎಲ್ಲಾ ನಾಯಿಗಳಿಗೆ ಆಶ್ರಯ ಸಿಗಬೇಕಾದರೆ ಕನಿಷ್ಠ 2000 ಹೊಸ ಆಶ್ರಯ ಕೇಂದ್ರಗಳನ್ನು ನಿರ್ಮಿಸಬೇಕಾಗುತ್ತವೆ.

ಇದಕ್ಕೆ 15000 ಕೋಟಿ ರುಪಾಯಿ ನಿರ್ಮಾಣ ವೆಚ್ಚ ಹಾಗೂ ವಾರಕ್ಕೆ 5 ಕೋಟಿ ರು. ಆಹಾರ ವೆಚ್ಚವಾಗಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರ ರಾಜಧಾನಿ ಪ್ರದೇಶದ ಬೇರೆ ನಗರಗಳಾದ ಗುರುಗ್ರಾಮ (50000 ನಾಯಿಗಳಿಗೆ ಕೇವಲ 50 ನಾಯಿಗಳು ವಾಸಿಸಬಹುದಾದ 2 ಚಿಕ್ಕ ಆಶ್ರಯ ಕೇಂದ್ರ), ಘಾಜಿಯಾಬಾದ್ (48000 ನಾಯಿಗಳಿಗೆ ಯಾವುದೇ ಅಧಿಕೃತ ಆಶ್ರಯ ಕೇಂದ್ರವಿಲ್ಲ) ಮತ್ತು ನೊಯ್ಡಾದಲ್ಲಿ (1.5 ಲಕ್ಷ ನಾಯಿಗಳಿಗೆ 4 ಖಾಸಗಿ ಕೇಂದ್ರಗಳು) ಸಹ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ. ಶೀಘ್ರವಾಗಿಯೇ ಕ್ರಮ ಕೈಗೊಂಡು ಮೂಲ ಸೌಕರ್ಯಗಳನ್ನು ನಿರ್ಮಿಸಿದರೂ, ಇವುಗಳ ನಿರ್ವಹಣೆಗೆ ಅಗತ್ಯವಿರುವ ಮಾನವ ಸಂಪನ್ಮೂಲ ಮತ್ತು ವಾಹನಗಳ ಕೊರತೆಯೂ ತೀವ್ರವಾಗಿವೆ.

ಜಾಗತಿಕ ಮಾದರಿಗಳು: ಹಾಗಂತ ಇದೇನೂ ವಿಶ್ವದಲ್ಲಿ ಮೊದಲ ಬಾರಿಗೆ ಕೈಗೊಳ್ಳಲಾದ ನಿರ್ಧಾರವಲ್ಲ. ಸಿಂಗಾಪುರ್, ನೆದರ್ಲ್ಯಾಂಡ್ಸ್, ಭೂತಾನ್‌ನಂಥ ದೇಶಗಳು ಈಗಾಗಲೇ ಈ ಸಮಸ್ಯೆಯನ್ನು ಬಗೆಹರಿಸಿವೆ. ನೆದರ್ಲ್ಯಾಂಡ್ಸ್ ಕೈಗೊಂಡ ರಾಷ್ಟ್ರೀಯ ಕಾರ್ಯಕ್ರಮದಡಿ ಕಡಿಮೆ ಅವಧಿಯಲ್ಲಿಯೇ ಶೇ.70ಕ್ಕೂ ಹೆಚ್ಚಿನ ಹೆಣ್ಣು ನಾಯಿಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯನ್ನು ಮಾಡುವುದರ ಜತೆಗೆ ಬೀದಿನಾಯಿಗಳಿಗೆ ರಬಿಸ್ ಲಸಿಕೆಯನ್ನು ನೀಡಲಾಯಿತು.

ಪ್ರಾಣಿ ಹಿಂಸೆ ಅಥವಾ ನಿರ್ಲಕ್ಷ್ಯಗಳನ್ನೂ ಗಂಭೀರ ಅಪರಾಧ ಎಂದು ಪರಿಗಣಿಸಿ, ಹೆಚ್ಚಿನ ದಂಡಗಳನ್ನು ವಿಧಿಸಲಾಯಿತು. ಪ್ರಾಣಿಗಳ ಹಕ್ಕುಗಳ ಸಂರಕ್ಷಣೆಗೆ ವಿಶೇಷ ಪೊಲೀಸ್ ಪಡೆಗಳನ್ನು ರಚಿಸಲಾ ಯಿತು. ಎಲ್ಲಾ ನಾಯಿಗಳ ನೋಂದಣಿಯನ್ನು ಕಡ್ಡಾಯಗೊಳಿಸಲಾಯಿತು ಮತ್ತು ಅವುಗಳಿಗೆ ಮೈಕ್ರೋಚಿಪ್ ಅಳವಡಿಸಲಾಯಿತು.

ಪ್ರಾಣಿಗಳ ದತ್ತು ಪಡೆಯುವುದಕ್ಕೆ ಪ್ರೋತ್ಸಾಹಿಸುವುದರ ಜತೆಗೆ ಸಾರ್ವಜನಿಕರ ಜವಾಬ್ದಾರಿ ಕುರಿತ ಜಾಗೃತಿ ಕಾರ್ಯಕ್ರಮಗಳನ್ನು ಸತತವಾಗಿ ಆಯೋಜಿಸಲಾಯಿತು. ಈ ಎಲ್ಲಾ ಪರಿಶ್ರಮದ ಕಾರಣ ಹತ್ತು ಲಕ್ಷಕ್ಕೂ ಹೆಚ್ಚು ನಾಯಿಗಳು ತಮ್ಮ ಮನೆಯನ್ನು ಕಂಡುಕೊಂಡು ನೆದರ್ಲ್ಯಾಂಡ್ ಬೀದಿನಾಯಿಗಳಿಂದ ಮುಕ್ತವಾಯಿತು.

ಇನ್ನು ಸಿಂಗಾಪುರ್ ಬಹಳ ಹಿಂದಿನಿಂದಲೇ ಹಲವು ಕ್ರಮಗಳನ್ನು ಜಾರಿಗೆ ತಂದಿದ್ದರ ಪರಿಣಾಮವಾಗಿ 1953ರಿಂದ ಇಡೀ ದೇಶ ರಬಿಸ್ ಮುಕ್ತವಾಗಿದೆ. ಆದಾಗ್ಯೂ, ಅಲ್ಲಿನ ಸರಕಾರ ತನ್ನ ಪ್ರಯತ್ನವನ್ನು ನಿಲ್ಲಿಸಿಲ್ಲ. 2018ರಿಂದ ವೈಜ್ಞಾನಿಕ ಮತ್ತು ದತ್ತಾಂಶ ಆಧಾರಿತ ಮಾದರಿಯನ್ನು ಜಾರಿಗೆ ತಂದಿದೆ. ಬೀದಿ ನಾಯಿಗಳ ಸಂತಾನಶಕ್ತಿಹರಣ, ಚಿಪ್ ಅಳವಡಿಕೆ, ಲಸಿಕೀಕರಣಗಳ ಜತೆಗೆ ಆಕ್ರಮಣಕಾರಿ ವರ್ತನೆ ಇರುವ ನಾಯಿಗಳನ್ನು ತಹಬದಿಗೆ ತಂದು, ತರಬೇತಿ ನೀಡಿ ಅವುಗಳನ್ನು ಮನೆಗಳಿಗೆ ಸೇರಿಸಲು ಅರ್ಹ ಪ್ರಾಣಿಗಳಾಗಿ ಪರಿವರ್ತಿಸಿದೆ.

ಇನ್ನು ಭೂತಾನ್ ಸಹ ಎಲ್ಲಾ ಬೀದಿನಾಯಿಗಳನ್ನು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಿ, ಜತೆಗೆ ಲಸಿಕೆಯನ್ನು ನೀಡುವ ಕಾರ್ಯವನ್ನು 2023ಕ್ಕೆ ಪೂರ್ಣಗೊಳಿಸಿತು. 14 ವರ್ಷಗಳ ಕಾಲ ಸತತವಾಗಿ ನಡೆದ ಈ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಸಾವಿರಾರು ಸ್ವಯಂಸೇವಕರು ಕೈಜೋಡಿಸಿದ್ದರು. ಇವೆಲ್ಲದರಿಂದ, ಭೂತಾನ್ ರೇಬಿಸ್‌ನಿಂದ ಬಹುಪಾಲು ಮುಕ್ತವಾಯಿತು. ಇಲ್ಲಿ ಅರ್ಥವಾಗುವ ಒಂದು ಮುಖ್ಯ ಅಂಶವೆಂದರೆ, ಇವೆಲ್ಲ ಕಾರ್ಯಗಳ ಅನುಷ್ಠಾನಕ್ಕೆ ಸತತ ಪರಿಶ್ರಮ, ದೀರ್ಘಕಾಲದ ಕಾರ್ಯಕ್ರಮ ಹಾಗೂ ಇದಕ್ಕೆ ನೆರವಾಗುವ ಸಹಸ್ರಾರು ಕೈಗಳು ಬೇಕಾಗುತ್ತವೆ ಎಂಬುದು.

ದೆಹಲಿಯಲ್ಲಿನ 10 ಲಕ್ಷ ನಾಯಿಗಳ ತೆರವಿಗೆ ಮತ್ತು ನಮ್ಮ ದೇಶದಲ್ಲಿರುವ 6 ಕೋಟಿ ನಾಯಿಗಳ ನಿರ್ವಹಣೆಗೆ ಸಮಗ್ರ ಯೋಜನೆಯೊಂದರ ಅವಶ್ಯಕತೆಯಂತೂ ಇದೆ.

ಕಾನೂನು ಏನು ಹೇಳುತ್ತದೆ?: ಬೀದಿನಾಯಿಗಳು ಮತ್ತು ಸಾಕುನಾಯಿಗಳೆರಡಕ್ಕೂ ಭಾರತೀಯ ಕಾನೂನು ಬಲವಾದ ರಕ್ಷಣೆ ಮತ್ತು ನಿಯಂತ್ರಣವನ್ನು ಒದಗಿಸುತ್ತದೆ.

ಮೊದಲಿಗೆ, ನಮ್ಮ ಸಂವಿಧಾನದ 51ಎ (ಜಿ) ವಿಧಿಯು ಪ್ರಾಣಿಗಳ ಬಗ್ಗೆ ಸಹಾನುಭೂತಿಯನ್ನು ಹೊಂದುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯವೆಂದು ಪ್ರತಿಪಾದಿಸುತ್ತದೆ. ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ, 1960 (ಪಿಸಿಎ) ಸಾಕುಪ್ರಾಣಿ ಮತ್ತು ಬೀದಿನಾಯಿ ಸೇರಿದಂತೆ ಪ್ರಾಣಿಗಳ ಮೇಲಿನ ಕ್ರೌರ್ಯವನ್ನು ನಿಷೇಧಿಸುತ್ತದೆ ಮತ್ತು ನಿಂದನೆ, ನಿರ್ಲಕ್ಷ್ಯ ಅಥವಾ ಅನಗತ್ಯ ನೋವು ಉಂಟುಮಾಡುವುದಕ್ಕೆ ಶಿಕ್ಷೆಯನ್ನು ಕಡ್ಡಾಯಗೊಳಿಸುತ್ತದೆ.

2023ರ ಪಶುಜನ್ಮ ನಿಯಂತ್ರಣ ನಿಯಮಗಳ ಅನುಸಾರ ಪುರಸಭೆಗಳು ಬೀದಿನಾಯಿಗಳ ಸಂಖ್ಯೆಯನ್ನು ಮಾನವೀಯವಾಗಿ ನಿರ್ವಹಿಸಬೇಕಾಗುತ್ತದೆ. ಅಂದರೆ, ನಾಯಿಗಳನ್ನು ಸೆರೆಹಿಡಿದು, ಸಂತಾನಶಕ್ತಿಹರಣಗೊಳಿಸಿ, ರೇಬಿಸ್ ಲಸಿಕೆ ನೀಡಿ ಮತ್ತು ನಂತರ ಅವುಗಳ ಮೂಲಪ್ರದೇಶಕ್ಕೆ ಹಿಂದಿರುಗಿಸಬೇಕು.

ಅವುಗಳು ಅನಾರೋಗ್ಯದಿಂದ ಕೂಡಿದ್ದರೆ ಮತ್ತು ಆಕ್ರಮಣಕಾರಿಯಾಗಿದ್ದರೆ ಸೂಕ್ತ ಚಿಕಿತ್ಸೆ ನೀಡಬೇಕಾಗುತ್ತದೆ. ಬೀದಿನಾಯಿಗಳನ್ನು ಕೊಲ್ಲುವುದನ್ನು ಈ ನಿಯಮಗಳು ಸ್ಪಷ್ಟವಾಗಿ ನಿಷೇಧಿಸುತ್ತವೆ. ಆದರೆ, ಸಾರ್ವಜನಿಕ ಸುರಕ್ಷತೆಗಾಗಿ ನ್ಯಾಯಾಲಯ ಆಗ 11ರಂದು ನೀಡಿದ ಆದೇಶವು ಪ್ರಸ್ತುತ ಅಸ್ತಿತ್ವದಲ್ಲಿರುವ ಪಶುಜನ್ಮ ನಿಯಂತ್ರಣ ನಿಯಮಗಳ ಅಗತ್ಯವನ್ನು ತಾತ್ಕಾಲಿಕವಾಗಿ ರದ್ದುಗೊಳಿಸುತ್ತದೆ. ಅಂದರೆ, ಲಸಿಕೀಕರಣ ಮತ್ತು ಸಂತಾನಶಕ್ತಿ ಹರಣವಾದ ನಾಯಿಗಳನ್ನು ಅವುಗಳ ಮೂಲಸ್ಥಾನಕ್ಕೆ ಸೇರಿಸಬೇಕು ಎಂದಿದ್ದ ಹಿಂದಿನ ನಿಯಮ ಈಗ ಇಲ್ಲದಂತಾಗಿದೆ.

ಮುಂದಿನ ದಾರಿ: ಗಂಭೀರ ಸಮಸ್ಯೆಗಳು ಶೀಘ್ರ ಮತ್ತು ಗಂಭೀರ ಕ್ರಮವನ್ನೇ ಬೇಡುತ್ತವೆ. ಅದೇ ಕಾರಣಕ್ಕೆ ನ್ಯಾಯಾಲಯವು 8 ವಾರಗಳ ಗಡುವು ವಿಧಿಸಿರುವಂಥದ್ದು. ಬೆಳೆಯಬೇಕಾದ ಪುಟ್ಟ ಕಂದಮ್ಮಗಳು, ಮನೆಯಲ್ಲಿನ ಹಿರಿಯರು ಬೀದಿನಾಯಿಯ ಆಕ್ರಮಣಕ್ಕೆ ತುತ್ತಾಗುವುದನ್ನು ಯಾರಿಗೂ ಸಹಿಸಲು ಸಾಧ್ಯವಿಲ್ಲ. ಹಾಗೆಂದು ತಕ್ಷಣದ ಪರಿಹಾರಕ್ಕೆ ಬೀದಿನಾಯಿಗಳ ಹರಣವಾದರೆ ಅದನ್ನೂ ಒಪ್ಪಲು ಸಾಧ್ಯವಿಲ್ಲ. ಹಂತ ಹಂತವಾಗಿ ಸಮರ್ಪಕ ಪಶು ವೈದ್ಯಕೀಯ ಸೌಲಭ್ಯಗಳಿರುವ ಆಶ್ರಯ ಕೇಂದ್ರಗಳನ್ನು ಅಭಿವೃದ್ಧಿಪಡಿಸಿ, ಎಲ್ಲಾ ಬೀದಿನಾಯಿಗಳಿಗೆ ಲಸಿಕೆಯಿತ್ತು, ಪ್ರಾಣಿ ದತ್ತು ಕ್ರಿಯೆಗೆ ನೆರವು ನೀಡಿ, ಜವಾಬ್ದಾರಿಯುತವಾಗಿಯೇ ಪ್ರಾಣಿಗಳನ್ನು ಬೀದಿಯಿಂದ ಅದರ ಮನೆ ಸೇರಿಸುವ ಕಾರ್ಯ ನಡೆಯಬೇಕಾಗಿದೆ.

ಇದು ದೀರ್ಘಕಾಲಿಕ ದೃಷ್ಟಿಕೋನದಿಂದ ಮಾತ್ರ ಬಗೆಹರಿಸಬಹುದಾದಂಥ ಒಂದು ಸಮಸ್ಯೆ. ಸಾರ್ವಜನಿಕ ಸುರಕ್ಷತೆ ಮತ್ತು ಪ್ರಾಣಿಹಿತಾಸಕ್ತಿ ಸಮತೋಲನ ಕಾಯುವ ರಾಷ್ಟ್ರೀಯ ನೀತಿಗೆ ಕಾರಣವಾಗುವಂಥ ವಿಷಯವಿದು. ಭಾರತದ ಮಕ್ಕಳು ಮತ್ತು ಅದರ ಪ್ರಾಣಿ–ಸಂಪತ್ತು, ಎರಡನ್ನೂ ಉಳಿಸುವ ಕ್ರಮ ಮಾತ್ರವೇ ನಿಜವಾದ ಪರಿಹಾರವಾಗಬಲ್ಲದು.

**(ಲೇಖಕರು** ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಗ್ರಾಂಟ್ಸ್ ಮ್ಯಾನೇಜರ್)



## ಕನ್ನಡ ಕವನಗಳು

★★★★★★

### ಪ್ರೇಮಿಯಾಗಲಿ ಹೇಗೆ?

ಪ್ರೀತಿಯಿರದ ಬಾಳಿಗಿಂದು
ಪ್ರೇಮಿಯಾಗಲಿ ಹೇಗೆ
ನೀತಿಯಿರದ ಹೃದಯಕಿಂದು
ಸ್ನೇಹಿಯಾಗಲಿ ಹೇಗೆ
ಕಡಲತೀರಕೆ ಹೊಡೆವ ನೀರಿಗಿಂದು
ಪೆಟ್ಟಾಗದೇನು
ತಡೆಹೇಳುವಂತ ಮಿಲನಕಿಂದು
ಕತೆಯಾಗಲಿ ಹೇಗೆ
ಮಿಡಿವ ಮನಸ್ಸಿ ಲ್ಲದಲ್ಲಿ
ಬದುಕಿಂದು ಹುಟ್ಟಬಹುದೆ
ಕಾರಣವಿಲ್ಲದೆ ಸಿಡುಕುವಳಿಗೆ
ಏಣಿಯಾಗಲಿ ಹೇಗೆ
ಸ್ವರ್ಗನರಕಗಳು ಬುವಿಯಲ್ಲಿಯೇ
ಕಾಲನ್ನು ಊರಿವೆ
ಮೆಟ್ಟಿಲುಗಳ ಏರಿ ಕನಸನಿಂದು
ಭೇಟಿಯಾಗಲಿ ಹೇಗೆ
ನನಸುಗಳ ಹಂಬಲಿಸುವುದು
ತಪ್ಪೆನುವಿಯೊ ಈಶಾ
ಸಾಗುವಳು ಮೋಸದಲಿಂದು
ಜೊತೆಯಾಗಲಿ ಹೇಗೆ

**– ಹಾ ಮ ಸತೀಶ** ಬೆಂಗಳೂರು



## ಬೇರು




ಮನೆಯ ಹಿಂದೆ ಕಿಟಕಿಯ ಕೆಳಗೆ ಸಣ್ಣದೊಂದು ಅಂತರವಿದೆ. ಆ ಇಟ್ಟಿಗೆಯ ಮೇಲೆ ಬಿದ್ದ ಸಣ್ಣ ಮಣ್ಣಿನ ತುಂಡಿನ ಒಳಗಿನಿಂದ ಗಿಡ ಒಂದು ಚಿಗುರಿ ಬದುಕುವುದಕ್ಕೆ ಆಸೆ ಪಡ್ತಾ ಇದೆ. ಅದನ್ನು ನೋಡಿದ ನನಗೆ ಒಂದು ಕ್ಷಣ ನಗು ಬಂತು. ಈ ಗಿಡಕ್ಕೆ ಇನ್ನೂ ಬೆಳೆದು ಮರವಾಗುವ ಆಸೆ ಇದ್ದರೆ ಈ ಮಣ್ಣಿನ ಪುಟ್ಟ ತುಂಡಿನಿಂದ ಸಾಧ್ಯವಾಗುವುದಿಲ್ಲ. ಮುಂದೆ ಬೇರಿಳಿಸುವುದಕ್ಕೂ ಅವಕಾಶವೇ ಇಲ್ಲ. ಬೆಳೆಯುವ ದೊಡ್ಡ ಆಸೆ ಇದ್ದರೆ ಅದು ನೆಲವನ್ನೇ ಆಶ್ರಯಿಸಿಕೊಳ್ಳಬೇಕಿತ್ತು. ಸಿಕ್ಕ ಅವಕಾಶ ಅಂತ ಬಳಸಿಕೊಳ್ಳುವುದು ಒಳ್ಳೆಯದೇ ಆದರೆ ಅಲ್ಲಿ ಬದುಕು ದೊಡ್ಡದಾಗುವುದಿಲ್ಲ, ಗಿಡ ಅಲ್ಲೇ ಉಳಿದುಬಿಡುತ್ತದೆ. ಕೊನೆಗೆ ಸತ್ತೇ ಹೋಗ್ತದೆ. ಈ ಗಿಡಕ್ಕೆ ಅಷ್ಟು ಗೊತ್ತಾಗೋದಿಲ್ಲ ಎಂದು ನಾನು ಮಾತಾಡ್ತಾ ಇರುವಾಗ ಹಿಂದಿನಿಂದ ಬಂದ ಅಪ್ಪ ಹೇಳಿದರು, ನೋಡು ನೀನು ಸರಿಯಾಗಿ ಹೇಳಿದ್ದಿ, ನಿನಗೂ ಹಾಗೆ, ಎಲ್ಲಿ ನಿನಗೆ ಅವಕಾಶ ಸಿಗುತ್ತೆ ಅಂತ ನುಗ್ಗಿ ಬಿಡಬೇಡ. ಸಿಕ್ಕ ಅವಕಾಶದಿಂದ ನೀನು ತುಂಬಾ ಎತ್ತರಕ್ಕೆ ಬೆಳೆಯಬೇಕು, ನಿನ್ನ ಭವಿಷ್ಯದ ಬೇರುಗಳನ್ನು ಕೆಳಗಿಳಿಸಿ ಗಟ್ಟಿಯಾಗಿ ನಿಲ್ಲುವಂತಹ ಯೋಚನೆ ಮಾಡಿಕೊಂಡು ಅಲ್ಲೇ ಬೇರಿಳಿಸಿ ಬದುಕು ಕಟ್ಟಿಕೋ. ನಿನ್ನ ಬದುಕಿನ ಪಾಠ ನೀನೇ ಅರ್ಥ ಮಾಡಿಕೋಬೇಕು. ಅಪ್ಪನ ಮಾತು ಯೋಚನೆಗೆ ಸೂಕ್ತ ಅಂತ ಅನಿಸಿತು

## ಕೋಳಿ

ಇವತ್ತು ಬಿಡುವಾಗಿದ್ದಾಗ ಮನೆಯಲ್ಲಿ ಕುಳಿತಿದ್ದೆ ಅಪ್ಪ ಕೋಳಿ ಅಂಕಕ್ಕೆ ತೆಗೆದುಕೊಂಡು ಹೋಗುವ ಕೋಳಿ ಮನೆಯಲ್ಲಿ ಯಾರೂ ಇಲ್ಲದನ್ನ ನೋಡಿ ನನ್ನ ಜೊತೆಗೆ ಮಾತನಾಡಲು ಶುರು ಮಾಡಿತು. ನೋಡು ಮಾರಾಯ, ನಿನ್ನ ಜೀವನಕ್ಕೆ ಒಂದು ಅರ್ಥ ಇದೆಯಾ? ನಮ್ಮಷ್ಟು ಶ್ರೇಷ್ಠ ಜನ್ಮ ನಿಮ್ಮದಾಗುವುದಕ್ಕೆ ಸಾಧ್ಯವೇ ಇಲ್ಲ. ಬದುಕಿದ್ದ ಕ್ಷಣದಲ್ಲೂ ನಮ್ಮ ಮೌಲ್ಯ ದಿನದಿಂದ ದಿನಕ್ಕೆ ಹೆಚ್ಚಾಗ್ತಾ ಹೋಗುತ್ತೆ ನಮ್ಮ ಮೌಲ್ಯ ಕಡಿಮೆಯಾಗುವುದಿಲ್ಲ. ನಮ್ಮ ಖಾದ್ಯಗಳಿಗೆ ಹೆಚ್ಚು ಹೆಚ್ಚು ಮೌಲ್ಯಗಳು ಸಿಕ್ತಾನೆ ಹೋಗುತ್ತೆ. ನಮ್ಮನ್ನ ವಿವಿಧ ಹೆಸರುಗಳ ಮೂಲಕ ಖಾದ್ಯ ತಯಾರಿಸಿ ಚಪ್ಪರಿಸಿಕೊಂಡು ತಿಂತಾರೆ. ನಮ್ಮ ಮೌಲ್ಯ ಹುಟ್ಟಿನಿಂದ ಸಾಯುವವರೆಗೆ ಕೊನೆಯಾಗುವುದೇ ಇಲ್ಲ ಮೊಟ್ಟೆಯಿಂದ ದೊಡ್ಡವರಾಗಿ ಸತ್ತ ಮೇಲೂ ಕೂಡ. ಆದರೆ ನೀವು ಸಾಯುವವರೆಗೆ ಮಾತ್ರ ಒಂದಷ್ಟು ಮೌಲ್ಯ ಸಂಪಾದಿಸಿಕೊಳ್ಳುತ್ತೀರಿ ಸತ್ತ ಮೇಲೆ ನಿಮ್ಮನ್ನ ನಿಮ್ಮ ಮನೆಯೊಳಗೆ ಇಡುವುದಿಲ್ಲ. ಹೂತು ಹಾಕ್ತಾರೆ ಅಥವಾ ಸುಟ್ಟು ಹಾಕ್ತಾರೆ. ಹಾಗಾಗಿ ಪ್ರತಿದಿನ ನನಗೆ ಕಾಳು ಹಾಕ್ತಾ ಇದಿಯಲ್ಲ ಇನ್ನಾದ್ರೂ ಸ್ವಲ್ಪ ಗೌರವದಿಂದ ಕಾಳು ಹಾಕು. ಯಾಕೆಂದರೆ ನಿನಗಿಂತ ಹೆಚ್ಚು ಮೌಲ್ಯವನ್ನು ನಾನು ಸಂಪಾದಿಸಿದ್ದೇನೆ ಅರ್ಥವಾಯಿತಾ... ನನಗೆ ಏನೂ ಉತ್ತರ ಕೊಡುವುದಕ್ಕೆ ಆಗಲಿಲ್ಲ.

**–ಧೀರಜ್** ಬೆಳ್ಳಾರೆ



# ಧರ್ಮಸ್ಥಳ ಅಪಪ್ರಚಾರಕರ ವಿರುದ್ಧ ಉಗ್ರ ಕ್ರಮವಾಗಲಿ

## ಸುಜ್ಞಾನ ನಿಧಿ ಶಿಷ್ಯವೇತನದ ಮಂಜೂರಾತಿ ಪತ್ರ ವಿತರಣೆ ಮತ್ತು ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ ಆಗ್ರಹ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ನಾಡಿನ ಪವಿತ್ರ ಧಾರ್ಮಿಕ ಕ್ಷೇತ್ರವಾಗಿರುವ ಶ್ರೀ ಕ್ಷೇತ್ರ ಧರ್ಮಸ್ಥಳದ ವಿಚಾರದಲ್ಲಿ ಸುಳ್ಳು ಆಪಾದನೆ ಮಾಡಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡು ಕಾನೂನಿನಡಿ ಶಿಕ್ಷಿಸುವ ಕೆಲಸವಾಗಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಆಗ್ರಹಿಸಿದರು.

ಪಟ್ಟಣದ ಗಣಪತಿ ಪೆಂಡಾಲ್‌ನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಯೋಜನಾ ಕಚೇರಿ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ ಸುಜ್ಞಾನ ನಿಧಿ ಶಿಷ್ಯವೇತನದ ಮಂಜೂರಾತಿ ಪತ್ರ ವಿತರಣೆ ಮತ್ತು ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಧರ್ಮಸ್ಥಳ, ಡಾ. ವೀರೇಂದ್ರ ಹೆಗ್ಗಡೆ ಮತ್ತು ಅವರ ಕುಟುಂಬದವರ ಹೆಸರಿಗೆ ಕಳಂಕ ತರುವ ಹಾಗೂ ಕೋಟ್ಯಂತರ ಭಕ್ತರ ಭಾವನೆಗೆ ಧಕ್ಕೆ ತರುವ ಕಾರ್ಯ ಮಾಡುತ್ತಿರುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಕಲಾಪದ ವೇಳೆ ಧ್ವನಿಯೆತ್ತಿದ್ದು, ಹಿಂದೂಗಳ ಪವಿತ್ರ ಕ್ಷೇತ್ರವಾಗಿರುವ ಶ್ರೀ ಧರ್ಮಸ್ಥಳ ಕ್ಷೇತ್ರಕ್ಕೆ ಕೆಟ್ಟ ಹೆಸರು ತರಲು ಹಿಂದೂ ವಿರೋಧಿಗಳು ಪಿತೂರಿ ನಡೆಸುತ್ತಿವೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಕೂಡಲೇ ಕಿಡಿಗೇಡಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಎಸ್‌ಐಟಿ ಅಧಿಕಾರಿಗಳು ಗುಂಡಿ ಅಗೆಯುವ ಕೆಲಸ ಬಿಟ್ಟು ಷಡ್ಯಂತ್ರಕ್ಕೆ ಕಾರಣರಾಗಿರುವ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಈ ಮೂಲಕ ಶ್ರೀ ಧರ್ಮಸ್ಥಳ ಕ್ಷೇತ್ರದ ಪಾವಿತ್ರ್ಯತೆಯನ್ನು ಉಳಿಸಬೇಕು. ಕೋಟ್ಯಾಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ. ಅನಾಮಿಕನ ಮಾತು ಕೇಳಿ ಕಂಡ ಕಂಡಲ್ಲಿ ಅಗೆದು ಶ್ರೀ ಧರ್ಮಸ್ಥಳ ಕ್ಷೇತ್ರವನ್ನು ಮಲಿನ ಮಾಡಲು ಪ್ರಯತ್ನಿಸಲಾಗುತ್ತಿದೆ. ಇದು ಸುಳ್ಳು ಎಂದು ಸಾಬೀತಾಗಿದೆ. ಹಾಗಾಗಿ ಅನಾಮಿಕ ದೂರುದಾರ ಮತ್ತು ಆತನ ಹಿಂದೆ ಇರುವವರಿಗೆ ಯಾರಿಂದ ಧನ ಸಹಾಯವಾಗುತ್ತಿದೆ ಹಾಗೂ ಸುಳ್ಳು ಆರೋಪ ಮಾಡಲು ಅವರಿಗೆ ಪ್ರಚೋದನೆ ಮಾಡುತ್ತಿರುವ ಕಿಡಿಗೇಡಿಗಳು ಹಾಗೂ ಯೂಟ್ಯೂಬರ್‌ಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ನೇತೃತ್ವದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ರಾಜ್ಯಾದ್ಯಂತ ಸೇವೆ ಸಲ್ಲಿಸುತ್ತಿದೆ. ಸರ್ಕಾರ ನಿರ್ವಹಿಸಬೇಕಾದ ಕೆಲಸಕ್ಕಿಂತ ಹೆಚ್ಚಿನ ಕಾರ್ಯಕ್ರಮಗಳನ್ನು ಯೋಜನೆಯಿಂದ ಹಮ್ಮಿಕೊಳ್ಳುತ್ತಿರುವುದರಿಂದ ಸಾರ್ವಜನಿಕರು ಹೆಚ್ಚು ಸವಲತ್ತುಗಳನ್ನು ಪಡೆದು ಸಬಲರಾಗುತ್ತಿದ್ದಾರೆ. ಮಹಿಳೆಯರನ್ನು ಜಾಗೃತಿಗೊಳಿಸಿ ಆರ್ಥಿಕ ಪ್ರಜ್ಞಾವಂತಿಕೆಯನ್ನು ಬೆಳೆಸುವ ಕೆಲಸ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಾಡುತ್ತಿದೆ ಎಂದು ಬಾಲಕೃಷ್ಣ ಅವರು ಪ್ರಶಂಸಿದರು.

ಸಮಾಜ ಮತ್ತು ಕುಟುಂಬ ಸುಧಾರಣೆಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಮಹಿಳೆಯರಲ್ಲಿ ಆತ್ಮವಿಶ್ವಾಸ ಮೂಡಿಸಿದಾಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯವೆಂದು ನಂಬಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಬೆನ್ನೆಲುಬಾಗಿ ನಿಂತಿದೆ. ಸದಸ್ಯರಿಗೆ ಆರ್ಥಿಕ ಸಹಕಾರ ನೀಡುವುದರ ಜೊತೆಗೆ ವ್ಯವಹಾರದ ಶಿಸ್ತು, ಸಂಸಾರ ನಿರ್ವಹಣೆ ಹಾಗೂ ಸಂಸ್ಕಾರಯುತ ಜೀವನ ಮೌಲ್ಯಗಳನ್ನು ಕಲಿಸಿಕೊಡುತ್ತಿರುವ ಸಂಸ್ಥೆಯಲ್ಲಿ ಗ್ರಾಮಾಭ್ಯುದಯ, ಆರ್ಥಿಕ ಸಬಲತೆ, ಕೃಷಿ, ಸಾಮಾಜಿಕ ಕ್ಷೇತ್ರ, ಜನರ ಜೀವನಮಟ್ಟ ಸುಧಾರಣೆ ಸೇರಿದಂತೆ ಹಲವು ಸಮಾಜಮುಖಿ ಚಿಂತನೆಗಳೊಂದಿಗೆ ಹಲವಾರು ಕಾರ್ಯಕ್ರಮಗಳು ಸಮಾಜದ ದುರ್ಬಲ ವರ್ಗದವರಿಗೆ ಆಶಾಕಿರಣವಾಗಿದೆ.

ರಾಜ್ಯದಲ್ಲಿ 25 ಲಕ್ಷ ವಿದ್ಯಾರ್ಥಿಗಳಿಗೆ ಇದುವರೆಗೆ ಒಟ್ಟು 150 ಕೋಟಿ ಮೊತ್ತದ ಶಿಷ್ಯ ವೇತನ ವಿನಿಯೋಗವಾಗಿದೆ. ತಾಲ್ಲೂಕಿನಲ್ಲಿ 231 ವಿದ್ಯಾರ್ಥಿಗಳಿಗೆ ಶಿಷ್ಯ ವೇತನದ ದೊರಕಿದೆ. ಉತ್ತಮ ಶಿಕ್ಷಣ ಪಡೆದರೆ ಸಮಾಜದ ನಾನಾ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸಾಧ್ಯ. ಆರ್ಥಿಕ ಸಮಸ್ಯೆ ಇತರೆ ಕಾರಣಗಳಿಗೆ ಸಂಸ್ಥೆ ವತಿಯಿಂದ ಯೋಜನೆಯ ಪಾಲುದಾರ ಕುಟುಂಬದ ಮಕ್ಕಳ ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣಕ್ಕೆ ಅನುಕೂಲವಾಗುವಂತೆ ಸುಜ್ಞಾನನಿಧಿ ಶಿಷ್ಯವೇತನ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಸೌಲಭ್ಯದ ಸದುಪಯೋಗ ಪಡೆದು ನೌಕರಿ ಪಡೆದು, ನಂತರದಲ್ಲಿ ತಮ್ಮಂತೆ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ನೆರವಾಗಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ವರ್ಷ ಸುಜ್ಞಾನ ನಿಧಿ ಮಂಜೂರಾಗಿದ 110 ವಿದ್ಯಾರ್ಥಿಗಳಿಗೆ ಮಂಜೂರಾತಿ ಪತ್ರಗಳನ್ನು ವಿತರಿಸಲಾಯಿತು.

ಡಿವೈಎಸ್ಪಿ ಎನ್.ಕುಮಾರ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲ್ಲೂಕು ನಿರ್ದೇಶಕ ಯೋಗೀಶ್, ಜನಜಾಗೃತಿ ಸಮಿತಿಯ ಸದಸ್ಯರಾದ ಸಿ.ಎನ್.ಅಶೋಕ್, ಮನೋಹರ್, ಉಮೇಶ್, ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು, ಒಕ್ಕೂಟದ ಪದಾಧಿಕಾರಿಗಳು ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಪೋಷಕರು ಭಾಗವಹಿಸಿದ್ದರು.

# ಧರ್ಮಸ್ಥಳಕ್ಕೆ ಧರ್ಮಯಾತ್ರೆ

» ಮೊದಲನೇ ಪುಟದಿಂದ

ಹೀಗೆ ಸರ್ಕಾರದ ರೀತಿಯಲ್ಲೇ ಹಲವು ಕೆಲಸ-ಕಾರ್ಯ ಹಾಗು ಮಹಿಳಾ ಸಬಲೀಕರಣವನ್ನು ಧರ್ಮಸ್ಥಳ ಸಂಸ್ಥೆ ಮಾಡುತ್ತಿದೆ. ಯಾವುದೇ ಆರೋಪ ಇರಲಿ ಅದರ ಸತ್ಯಾಸತ್ಯತೆ ಬಯಲಾಗಬೇಕು. ಆ ಕಾರಣಕ್ಕೆ ನಮ್ಮ ಸರ್ಕಾರ ಎಸ್‌ಐಟಿ ರಚನೆ ಮಾಡಿದೆ. ಆದರೆ ವಿಪಕ್ಷ ಬಿಜೆಪಿ ಟೀಕೆ ಮಾಡುವುದು, ರಾಜಕೀಯ ಪ್ರೇರಿತವಾಗಿ ಅಪ ಪ್ರಚಾರ ಮಾಡುವುದು ಸರಿಯಲ್ಲ ಎಂದರು.

ಡಿ.ಕೆ.ಶಿವಕುಮಾರ್ ಅವರು ಒಬ್ಬರು ಭಕ್ತನಾಗಿ ಧರ್ಮಸ್ಥಳದ ಷಡ್ಯಂತ್ರ ನಡೆಯುತ್ತಿದೆ ಎಂದು ಮಾತನಾಡಿದ್ದಾರೆ. ಆದರೆ ಅವರು ರಾಜಕೀಯ ಬೆರೆಸಿಲ್ಲ. ಆದರೆ ಸಣ್ಣಪುಟ್ಟದಕ್ಕೂ ರಾಜಕೀಯ ಮಾಡುತ್ತಿರುವುದು ಬಿಜೆಪಿ ಎಂದು ವಾಗ್ದಾಳಿ ನಡೆಸಿದರು. ನಾನು ರಾಜಕಾರಣಿ ಯಾಗಿ ಅಲ್ಲ, ಒಬ್ಬ ಭಕ್ತನಾಗಿ ಧರ್ಮಯಾತ್ರೆ ಕೈಗೊಂಡಿದ್ದೇನೆಂದು ಹೇಳಿದರು.

ಕೋಟಿ ಕೋಟಿ ಜನರ ಭಕ್ತಿಯ ಕೇಂದ್ರವಾಗಿರುವ ಧರ್ಮಸ್ಥಳದ ವಿರುದ್ಧ ಯಾರೂ ಕೂಡ ಷಡ್ಯಂತ್ರ ಮಾಡಬಾರದೆಂದು ಮನವಿ ಮಾಡಿದರು. ಅಪ ಪ್ರಚಾರ ಮಾಡಿದವರ ವಿರುದ್ಧ ಕ್ರಮವಾಗಬೇಕು. ನಾವೆಲ್ಲರೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿ ಶ್ರೀಕ್ಷೇತ್ರಕ್ಕೆ ಹೋಗುತ್ತಿಲ್ಲ. ಬದಲಾಗಿ ಭಕ್ತರಾಗಿ ತೆರಳುತ್ತಿದ್ದೇವೆ. ಡಾ. ವೀರೇಂದ್ರ ಹೆಗ್ಗಡೆ ಅವರ ಜೊತೆಗೆ ನಾವಿದ್ದೇವೆ ಎಂದು ಹೇಳುವುದು ನಮ್ಮ ಯಾತ್ರೆಯ ಉದ್ದೇಶ ಎಂದರು.

# ಧರ್ಮಸ್ಥಳದ ವಿರುದ್ಧ ಅಪಪ್ರಚಾರ: ಸಿಬಿಐಗೆ ಆಗ್ರಹ

» ಮೊದಲನೇ ಪುಟದಿಂದ

ಸಮೀರ್ ಎಂಬಾತ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುತ್ತಿದ್ದಾನೆ. ಅವನನ್ನು ಬಂಧಿಸಲು ಸರ್ಕಾರ ವಿಫಲವಾಗಿದೆ. ಹಿಂದೂ ಧಾರ್ಮಿಕ ಕ್ಷೇತ್ರಗಳ ಮೇಲೆ ದಾಳಿ ನಡೆಯುತ್ತಿದ್ದರೂ ಸರ್ಕಾರ ಮೌನವಾಗಿರುವುದು ಆತಂಕಕಾರಿ ಎಂದು ಟೀಕಿಸಿದರು.

ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಶಾಸಕ, ಇದರ ಹಿಂದೆ ಯಾರೇ ಇದ್ದರೂ, ಎಷ್ಟೇ ಪ್ರಭಾವಶಾಲಿಗಳಾಗಿದ್ದರೂ ತನಿಖೆ ಮಾಡಿ ಸತ್ಯವನ್ನು ಬಹಿರಂಗಪಡಿಸಬೇಕು. ಬಿಜೆಪಿ ಸದಾ ಹಿಂದೂಗಳ ಪರವಾಗಿದ್ದು, ಧರ್ಮಸ್ಥಳ ಮತ್ತು ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ನಡೆ ಯುವ ಯಾವುದೇ ಅಪಪ್ರಚಾರವನ್ನು ಸಹಿಸಿಕೊಳ್ಳುವುದಿಲ್ಲ ಎಂದರು.

**ಪ್ರತಿಭಟನಾ ಮೆರಣಿಗೆ**

ಪಟ್ಟಣದ ಹಳೆಯ ಬಸ್ ನಿಲ್ದಾಣದಿಂದ ಉಪವಿಭಾಗಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಬಿಜೆಪಿ ಕಾರ್ಯಕರ್ತರು, ಬಳಿಕ ಎಸಿ ರಾಜೇಶ್ ಅವರಿಗೆ ಮನವಿ ಸಲ್ಲಿಸಿ ದರು. ತಾಲ್ಲೂಕು ಬಿಜೆಪಿ ಅಧ್ಯಕ್ಷ ಅಶ್ವಥ್ ವಳಲಹಳ್ಳಿ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ ಮಂಜುನಾಥ್, ನಗರ ಘಟಕ ಅಧ್ಯಕ್ಷ ಲೋಕೇಶ್, ತಾಲ್ಲೂಕು ಯುವ ಮೋರ್ಚಾ ಅಧ್ಯಕ್ಷ ನಿಖಿಲ್ ಹಲಸುಲಿಗೆ, ತಾಲ್ಲೂಕು ಮಹಿಳಾ ಘಟಕ ಅಧ್ಯಕ್ಷೆ ಬಬಿತ ವಿಶ್ವನಾಥ್, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಮಧು ಮತ್ತು ಅಗಣಿ ಸೋಮಶೇಖರ್ ಇದ್ದರು.

# ಧರ್ಮಸ್ಥಳ ವಿರುದ್ಧ ಪಿತೂರಿ ಖಂಡಿಸಿ ಪ್ರತಿಭಟನೆ

• ಪ್ರಜೋದಯ ವರದಿ



**ಹೊಳೆನರಸೀಪುರ:** ಹಿಂದೂಗಳ ನಂಬಿಕೆ ಕುರಿತು ಪವಿತ್ರ ಧಾರ್ಮಿಕ ಕ್ಷೇತ್ರ ಶ್ರೀ ಧರ್ಮಸ್ಥಳದ ಹೆಸರಿಗೆ ಮಸಿ ಬಳಿಯುವ ಪ್ರಯತ್ನ ನಡೆಸಿದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಆಗ ಮಾತ್ರ ಮತ್ತೊಬ್ಬರೂ ಹುರುಳಿಲ್ಲದೇ ಸುಳ್ಳು ಆರೋಪ ನಡೆಸುವುದು ತಪ್ಪುತ್ತದೆ ಎಂದು ಬಿಜೆಪಿ ಮುಖಂಡ ಮಳಲಿ ನಾರಾಯಣ ಒತ್ತಾಯಿಸಿದರು.

ಪಟ್ಟಣದಲ್ಲಿ ಪಕ್ಷಾತೀತವಾಗಿ ಕರೆ ನೀಡಿದ್ದ ಧರ್ಮಸ್ಥಳ ಪ್ರಕರಣದ ಅಪಪ್ರಚಾರ ವಿರೋಧಿಸಿ ನಡೆಸಿದ ಪ್ರತಿಭಟನಾ ಮೆರವಣಿಗೆಯಲ್ಲಿ ಮಾತನಾಡಿದ ಅವರು, ಕೋಟ್ಯಾಂತರ ಭಕ್ತರ ಧಾರ್ಮಿಕ ಕೇಂದ್ರ ಹಾಗೂ ಧರ್ಮಾಧಿಕಾರಿಗಳ ವಿರುದ್ಧ ಯಾವುದೇ ಸಾಕ್ಷ ಇಲ್ಲದೆ ಆರೋಪ ನಡೆಸಿದ್ದು ಸರಿಯಲ್ಲ. ಇಂತಹ ಹೀನ ಕೃತ್ಯ ನಡೆಸಿದ ಮುಸುಕುದಾರಿ, ಯೂಟ್ಯೂಬರ್ ಸಮೀರ್, ತಿಮರೋಡಿ ಹಾಗೂ ಗಿರೀಶ್ ಮಟ್ಟಣ್ಣನವರ್ ಇವರುಗಳ ವಿರುದ್ಧ ಅತ್ಯಂತ ಕಠಿಣ ಕ್ರಮ ಕೈಗೊಳ್ಳಬೇಕು. ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದವರ ನಂತರದ ದಿನಲ್ಲಿ ನ್ಯಾಯಾಲಯದ ಖಡಕ್ ಆದೇಶದಿಂದ ತಪ್ಪಿಸಿಕೊಳ್ಳಲಾಗದು ಎಂಬ ನಂಬಿಕೆ ನಮ್ಮಗಳಲ್ಲಿ ಇದೆ ಎಂದು ತಿಳಿಸಿದರು.

ಜೆಡಿಎಸ್ ಮುಖಂಡ ಎಚ್.ಎಸ್. ಪುಟ್ಟಸ್ವಾಮಪ್ಪ ಮಾತನಾಡಿ, ಧರ್ಮಸ್ಥಳ ಹೆಸರಿನಲ್ಲಿ ಅನೇಕ ಬಡವರ್ಗ ಸಹಾಯಧನ ಪಡೆದು ಜೀವನ ಕಟ್ಟಿಕೊಂಡಿವೆ. ಹಲವು ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬಿತನ ರೂಪಿಸಿದೆ. ಪವಿತ್ರ ಕ್ಷೇತ್ರದ ಬಗ್ಗೆ ಅಲ್ಲಿನ ಧರ್ಮಾಧಿಕಾರಿಗಳ ಬಗ್ಗೆ ಯಾರೋ ಧರ್ಮಾಂಧನ ಮಾತು ಕೇಳಿ ಅವಾಂತರ ಸೃಷ್ಟಿಸಿರುವುದು ಸರಿಯಲ್ಲ. ಇದನ್ನು ನಾಗರೀಕ ವೇದಿಕೆಗಳು ಖಂಡಿಸುತ್ತೇವೆ. ನಾವು ಧರ್ಮಸ್ಥಳದ ಪರ ಇದ್ದೇವೆ ಎಂಬ ಸಂದೇಶ ಬೀರಿದರು.

ಪುರಸಭಾ ಅಧ್ಯಕ್ಷ ಎಚ್.ಕೆ.ಪ್ರಸನ್ನ, ಬಿಜೆಪಿ ಮುಖಂಡ ಶ್ರೀಪತಿ, ಕಾರ್ಯದರ್ಶಿ ಮೋಹನ್, ಯುವ ಮುಖಂಡ ಅಮಿತ್ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಮಹಿಳೆಯರು ಇದ್ದರು.

# ಅಧ್ಯಕ್ಷ ಗಾದಿ ಕುತೂಹಲ: ರೇವಣ್ಣ ತೀರ್ಮಾನದತ್ತ ಚಿತ್ತ

» ಮೊದಲನೇ ಪುಟದಿಂದ

ಅವರಲ್ಲಿ ಯಾರಿಗಾದರೂ ಮತ್ತೊಮ್ಮೆ ಅಧ್ಯಕ್ಷ ಸ್ಥಾನ ಒಲಿಯಲಿದೆಯೇ ಅಥವಾ ಈ ಬಾರಿ ಹೊಸಬರಿಗೆ ಅವಕಾಶ ಸಿಗಲಿದೆಯೇ ಎಂಬ ಕುತೂಹಲ ಮೂಡಿದೆ. ಅದರ ಜೊತೆಗೆ ಹೆಚ್ಚು ಬಾರಿ ನಿರ್ದೇಶಕರಾಗಿರುವವರಿಗೆ ಅಧ್ಯಕ್ಷ ಸ್ಥಾನ ನೀಡಬೇಕೆಂಬ ಬೇಡಿಕೆಯೂ ಎದ್ದಿದೆ.

**ಸೂರಜ್ ರೇವಣ್ಣ ಹಿಂದೆ ಸರಿಯುವ ಸೂಚನೆ**

ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಅವರಿಗೆ ಅಧ್ಯಕ್ಷ ಸ್ಥಾನ ಸಿಗಲಿದೆ ಎಂದು ಊಹಿಸಲಾಗಿತ್ತು. ಆದರೆ, ಇತ್ತೀಚಿಗೆ ರೇವಣ್ಣ ಅವರ ಕುಟುಂಬದಲ್ಲಿ ನಡೆದ ಬೆಳವಣಿಗೆಗಳಿಂದ ಸೂರಜ್ ಅವರೇ ಹಿಂದೆ ಸರಿದಿದ್ದಾರೆ ಎಂಬ ಮಾತುಗಳು ಕೂಡ ಕೇಳಿ ಬರುತ್ತಿದೆ. ಇದಲ್ಲದೇ ಹಾಸನ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಸ್ಥಾನದಲ್ಲಿ ಹೆಚ್.ಡಿ.ರೇವಣ್ಣ ಅವರೇ ಇರುವುದರಿಂದ, ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನವನ್ನೂ ಮಗನಿಗೆ ನೀಡಿದರು ಎಂಬ ಟೀಕೆಗೆ ಗುರಿಯಾಗಬೇಕೆಂಬ ಉದ್ದೇಶದಿಂದ ಬೇರೆಯವರಿಗೆ ಅವಕಾಶ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷವನ್ನು ಸದೃಢಗೊಳಿಸಲು ಮತ್ತು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷ ಹಿಡಿತ ಸಾಧಿಸಬೇಕಾದರೆ ಪಕ್ಷ ಸಂಘಟನೆಗೆ ಒತ್ತು ನೀಡುವ ವ್ಯಕ್ತಿಗೆ ಮಣೆ ಹಾಕಬೇಕಾದ ಅನಿವಾರ್ಯತೆ ಇದೆ. ಈ ಎಲ್ಲಾ ಲೆಕ್ಕಾಚಾರದ ಮೇಲೆ ಅಧ್ಯಕ್ಷರು ಯಾರಾಬೇಕೆಂಬುದು ತೀರ್ಮಾನವಾಗಲಿದೆ. ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷರನ್ನು ಆಯ್ಕೆ ಮಾಡುವ ಸಂಬಂಧ ಹೆಚ್.ಡಿ.ರೇವಣ್ಣ ಅವರು ಸೋಮವಾರ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎನ್ನಲಾಗಿದೆ. ಹೀಗಾಗಿ ರೇವಣ್ಣ ಅವರ ನಿಲುವು ಮತ್ತು ತೀರ್ಮಾನವನ್ನು ಕಾಯುತ್ತಿರುವ ಆಕಾಂಕ್ಷಿಗಳು, ಅಧ್ಯಕ್ಷರ ಆಯ್ಕೆ ವೇಳೆ ತಮ್ಮ ಹೆಸರನ್ನು ಸೂಚಿಸುವಂತೆ ಇತರೆ ನಾಯಕರ ಹಿಂದೆ ಬಿದ್ದಿದ್ದಾರೆ.

**13 ನಿರ್ದೇಶಕರು, ಕ್ಷೇತ್ರಗಳು**

- ಸಿ.ಎನ್.ಬಾಲಕೃಷ್ಣ (ಚನ್ನರಾಯಪಟ್ಟಣ)
- ಡಾ.ಸೂರಜ್ ರೇವಣ್ಣ (ಹೊಳೆನರಸೀಪುರ)
- ಹೊನ್ನವಳ್ಳಿ ಸತೀಶ್ (ಅರಕಲಗೂಡು)
- ಎಂ.ಎನ್.ನಾಗರಾಜು (ಬೇಲೂರು)
- ಕಬ್ಬಿನಹಳ್ಳಿ ಜಗದೀಶ್ (ಆಲೂರು-ಸಕಲೇಶಪುರ)
- ಹನುಮೇಗೌಡ (ಹಾಸನ)
- ಶೇಖರಪ್ಪ (ಅರಸೀಕೆರೆ)
- ಸೋಮನಹಳ್ಳಿ ನಾಗರಾಜು (ಹಾಲು ಉತ್ಪಾದಕರ ಕ್ಷೇತ್ರ)
- ಕೆ.ಎಸ್.ಮಂಜೇಗೌಡ (ಹಾಲು ಉತ್ಪಾದಕರ ಕ್ಷೇತ್ರ)
- ಗಂಡಸಿ ಗಂಗಾಧರ್ (ಹಾಲು ಉತ್ಪಾದಕರ ಕ್ಷೇತ್ರ)
- ಬಿದರಿಕೆರೆ ಜಯರಾಮ್( ಇತರೆ ಸಹಕಾರ ಕ್ಷೇತ್ರ)
- ಹೆಚ್.ಎನ್.ದೇವೇಗೌಡ (ಕೃಷಿ ಉತ್ಪನ್ನ ಮಾರಾಟ ಕ್ಷೇತ್ರ)
- ಗಿರೀಶ್ ಚನ್ನವೀರಪ್ಪ (ವ್ಯವಸಾಯೇತರ ಕ್ಷೇತ್ರ)

# ಕಾರ್ಖಾನೆ ಮುಚ್ಚಿಸದಿದ್ದರೆ ಹೋರಾಟ

» ಮೊದಲನೇ ಪುಟದಿಂದ

ಅರಣ್ಯದಲ್ಲಿರುವ ಮರಗಳನ್ನು ಬಳಕೆ ಮಾಡುವ ಕಾರ್ಖಾನೆಗಳು, ಲೈಸೆನ್ಸ್ ಪಡೆಯದೆ ಅರಣ್ಯದಲ್ಲಿರುವ ಮರಗಳನ್ನು ಬಳಕೆ ಮಾಡುವ ಕಾರ್ಖಾನೆಗಳು ನಡೆಯುತ್ತಿರುವುದು ಗೊತ್ತಾಯಿತು. ಅಕ್ರಮ ಕಾರ್ಖಾನೆಗಳಿಗೆ ಪ್ರತಿ ದಿನ 1 ಸಾವಿರ ಲೋಡ್ ಮರ ಪೂರೈಕೆ ಮಾಡಲಾಗುತ್ತಿದೆ. ಅದನ್ನು ತಡೆಯಲು ಸರ್ಕಾರದ ಉನ್ನತ ಅಧಿಕಾರಿಗಳು ಮತ್ತು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರನ್ನು ಖುದ್ದಾಗಿ ಭೇಟಿ ಮಾಡಿ, ಮನವಿ ಮಾಡಿ, ಅಕ್ರಮ ತಡೆಯಿರಿ, ಕಾಡು ಉಳಿಸಿ ಎಂದು ಮನವಿ ಮಾಡಿ ದೆವು. ವರ್ಷ ಕಳೆದರೂ ನಮ್ಮ ಮನವಿಗೆ ಸ್ಪಂದನೆ ಸಿಕ್ಕಿಲ್ಲ ಎಂದು ದೂರಿದರು.

ಸರ್ಕಾರದ ನಿರ್ಲಕ್ಷ್ಯದ ವಿರುದ್ಧ ರೈತ ಸಂಘದಿಂದ ಹೈಕೋರ್ಟ್ ಮೆಟ್ಟಿಲೇರಿದ ಪರಿಣಾಮ, ಹಾಸನದಲ್ಲಿ ಅಕ್ರಮವಾಗಿ ನಡೆಯುತ್ತಿದ್ದ 45 ಮರದ ಸಾಮಿಲ್‌ಗಳನ್ನು ಮುಚ್ಚುವಂತೆ ನ್ಯಾಯಾಲಯ ಆದೇಶ ನೀಡಿದೆ. ಉಳಿದವುಗಳ ಬಗ್ಗೆಯೂ ವರದಿ ಕೇಳಿದೆ. ಅಕ್ರಮ ಮರದ ಕಾರ್ಖಾನೆಗಳನ್ನು ಸರ್ಕಾರ ಮುಂದಾಗದಿದ್ದರೆ ಮತ್ತೊಮ್ಮೆ ಕೋರ್ಟ್ ಮೊರೆ ಹೋಗುತ್ತೇವೆ ಎಂದು ಅವರು ತಿಳಿಸಿದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಆನೆಕೆರೆ ರವಿ, ಜಿಲ್ಲಾಧ್ಯಕ್ಷ ಬಾಬು, ಸಂಚಾಲಕ ಮೊಹಮ್ಮದ್ ಸಾದಿಕ್, ಕಾರ್ಮಿಕ ಘಟಕದ ಅರುಣ್ ಕುಮಾರ್, ಈರಣ್ಣ ಇದ್ದರು.

# ಗಾಯಗೊಂಡಿದ್ದ ಜಿಂಕೆಗೆ ಶುಶ್ರೂಷೆ



• ಪ್ರಜೋದಯ ವರದಿ

**ಸಕಲೇಶಪುರ:** ಅಪರಿಚಿತ ವಾಹನದ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿದ್ದ ಜಿಂಕೆಯ ಶುಶ್ರೂಷೆ ಮಾಡಿ, ಅರಣ್ಯ ಇಲಾಖೆಗೆ ಒಪ್ಪಿಸಿರುವ ಘಟನೆ ತಾಲ್ಲೂಕಿನ ಗುಲಗಳಲೆ ರಾಟೆಮನೆ ಕ್ರಾಸ್ ಬಳಿ ನಡೆದಿದೆ.

ಜಿಂಕೆ ರಸ್ತೆ ದಾಟುವ ವೇಳೆ ಅಪರಿಚಿತ ವಾಹನ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯ ಗೊಂಡಿತು. ಘಟನೆಯನ್ನು ಗಮನಿಸಿದ ಸ್ಥಳೀಯರು ಹಾಗು ಮಲೆನಾಡು ರಕ್ಷಣಾ ಸೇನೆಯ ರಾಜ್ಯಾಧ್ಯಕ್ಷ ಸಾಗರ ಜಾನೆಕೆರೆ, ಕಲಂದರ್, ವಿನಯ್ ಮತ್ತು ದಿವಾಕರ್ ತಕ್ಷಣವೇ ಸ್ಥಳಕ್ಕೆ ಧಾವಿಸಿ ಪ್ರಾಣಾಪಾಯದಲ್ಲಿದ್ದ ಜಿಂಕೆಗೆ ನೆರವಾದರು.

ಮಾಹಿತಿ ದೊರಕಿದ ತಕ್ಷಣ ಅರಣ್ಯ ಇಲಾಖೆ ಅಧಿಕಾರಿ ದೇವರಾಜ್ ಅವರ ನೇತೃತ್ವದ ಸಿಬ್ಬಂದಿ ಸ್ಥಳಕ್ಕಾಗಮಿಸಿ, ಜಿಂಕೆಯನ್ನು ಇಲಾಖೆಯ ವಾಹನದಲ್ಲಿ ಹತ್ತಿರದ ಪಶು ಆಸ್ಪತ್ರೆಗೆ ಸಾಗಿಸಿದರು. ಪಶುವೈದ್ಯ ಡಾ.ಶಿವು ಅವರು ತುರ್ತು ಚಿಕಿತ್ಸೆ ನೀಡಿದ ಪರಿಣಾಮ ಜಿಂಕೆಯ ಪ್ರಾಣ ಉಳಿಯಿತು.

ಗಾಯಗೊಂಡ ಜಿಂಕೆಗೆ ಸಕಲೇಶಪುರ ಅರಣ್ಯ ಕಚೇರಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಹೆಚ್ಚಿನ ಚಿಕಿತ್ಸೆಗೆ ಹಾಸನ ಪಶು ಆಸ್ಪತ್ರೆಗೆ ಸಾಗಿಸಲಾಗುವುದೆಂದು ಅಧಿಕಾರಿಗಳು ತಿಳಿಸಿದ್ದಾರೆ.

ಅರಣ್ಯ ಮಾರ್ಗಗಳಲ್ಲಿ ಪ್ರಾಣಿಗಳ ಸಂಚಾರ ಹೆಚ್ಚಿರುವ ಕಾರಣ, ರಸ್ತೆ ಬದಿಯಲ್ಲಿ ಎಚ್ಚರಿಕಾ ಫಲಕಗಳು ಮತ್ತು ಬ್ಯಾರಿಕೇಡ್‌ಗಳ ನಿರ್ಮಾಣ ಅಗತ್ಯ. ಜೊತೆಗೆ ಶಾಶ್ವತ ಪಶುವೈದ್ಯ ಹುದ್ದೆ ಗಳನ್ನು ನೇಮಕ ಮಾಡಿದರೆ ಕಾಡುಪ್ರಾಣಿಗಳ ರಕ್ಷಣೆಗೆ ನೆರವಾಗಲಿದೆ ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

# ಶಿವಲಿಂಗೇಗೌಡ ಬೇಡಿಕೆ ಹಿಂಪಡೆಯಲು ಆಗ್ರಹ




• ಪ್ರಜೋದಯ ವರದಿ

**ಹಾಸನ:** ಕುರಿಗಾಹಿಗಳಿಗೆ ಸಿಗುವ ಸೌಲಭ್ಯಗಳನ್ನು ಒಕ್ಕಲಿಗರಿಗೂ ನೀಡಬೇಕೆಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ವಿಧಾನಸಭೆ ಅಧಿವೇಶನದಲ್ಲಿ ಒತ್ತಾಯಿಸಿರುವ ತಮ್ಮ ಬೇಡಿಕೆಯನ್ನು ಹಿಂಪಡೆಯಬೇಕೆಂದು ಯಾದವ ಸಮುದಾಯದ ಮುಖಂಡ ಜವರಪ್ಪ ಅವರು ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುರಿ ಕಾಯುವ ಗೊಲ್ಲ, ಕುರುಬ, ಯಾದವ ಸಮುದಾಯದ ಅಲೆಮಾರಿಗಳಿಗೆ ಸಿಗುವ ಸೌಲಭ್ಯವನ್ನು ಒಕ್ಕಲಿಗರಿಗೂ ಕೊಡಬೇಕು ಎಂದು ಅಧಿವೇಶನದಲ್ಲಿ ಮಾತನಾಡಿರುವ ಕೆ.ಎಂ.ಶಿವಲಿಂಗೇಗೌಡ ಅವರು ಸರ್ಕಾರ ನಮ್ಮ ಸಮುದಾಯಕ್ಕೆ ಸಿಗುವ ಸೌಲಭ್ಯ ಕಿತ್ತುಕೊಳ್ಳಲು ಮುಂದಾಗಿದ್ದಾರೆ ಎಂದು ಅವರು ಆರೋಪಿಸಿದರು.

ಕುರಿಗಾಹಿಗಳ ದೌರ್ಜನ್ಯ ತಡೆ ಕಾಯ್ದೆ ಮಂಡಿಸಿದ ಸಂದರ್ಭದಲ್ಲಿ ಶಿವಲಿಂಗೇಗೌಡರು, ನಾವೂ ಕುರಿಗಾಹಿ ವಂಶದಲ್ಲಿ ಹುಟ್ಟಿದ್ದೇವೆಂದು ಸದನಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ. ಗೊಲ್ಲ ಸೇರಿ ಅನೇಕ ಹಿಂದುಳಿದ ಸಮುದಾಯಗಳು ಅರಸೀಕೆರೆ ತಾಲ್ಲೂಕಿನಲ್ಲಿ ಕುರಿ ಕಾಯುವ ಕಸುಬು ಮಾಡುತ್ತಿವೆ. ಅವರಿಗೆ ಸಿಗುವ ಸರ್ಕಾರದ ಸೌಲಭ್ಯಗಳನ್ನು ನಮಗೂ ಕೊಡಿ ಎಂದಿರು ವುದು ಶಾಸಕರಿಗೆ ಶೋಭೆ ತರುವುದಿಲ್ಲ. ಇದು ಹಿಂದುಳಿದ ಜಾತಿಗಳಿಗೆ ಮಾಡಿದ ಅವಮಾನ ಎಂದು ಕಿಡಿಕಾರಿದರು. ಅವರು 4 ಬಾರಿ ಶಾಸಕರಾಗಲು ಹಿಂದುಳಿದ ಜಾತಿಗಳೇ ಕಾರಣ, ಈ ಸಮುದಾಯಗಳ ಋಣ ತೀರಿಸುವ ಬದಲು ತುಳಿಯುವ ಕೆಲಸಕ್ಕೆ ಮುಂದಾಗಿರುವುದು ಖಂಡನೀಯ. ನಮ್ಮ ಸವಲತ್ತುಗಳನ್ನು ಅವರು ಕೇಳೋದು ಸರಿಯಲ್ಲ, ಕಬಳಿಸುವುದು ತಪ್ಪು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡ ಅಜ್ಜಪ್ಪ ಮಾತನಾಡಿ, ನಮ್ಮ ಸಮುದಾಯ ಮೊದಲೇ ಕಷ್ಟದಲ್ಲಿದೆ. ಆದರೂ ಶಾಸಕರು ನಮ್ಮ ಪಾಲು ಕೇಳುವುದು ಖಂಡನೀಯ. ವಲಸೆ ಕಾರ್ಮಿಕರ ಸವಲತ್ತುಗಳನ್ನು ಯಥಾಸ್ಥಿತಿ ಮುಂದುವರಿಸಬೇಕು. ಶಾಸಕರು ಕೂಡಲೇ ಬಹಿರಂಗ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಅವರ ಮನೆ ಮುಂದೆ ಕರಿ ಕಂಬಳಿ ಹೊದ್ದುಕೊಂಡು ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದರು.

ಈ ಸಂದರ್ಭದಲ್ಲಿ ರಂಗಸ್ವಾಮಿ, ಜಯರಾಂ, ರಘು ಇದ್ದರು.

# ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಹಾಸನ ಜಿಲ್ಲಾ ಬಾಬು ಜಗಜೀವನ್ ರಾಮ್ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ 2024-25 ನೇ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ತೇರ್ಗಡೆಹೊಂದಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು 2024-25 ನೇ ಸಾಲಿನಲ್ಲಿ ಪ್ರಥಮ ಪ್ರಯತ್ನದಲ್ಲಿ ತೇರ್ಗಡೆ ಹೊಂದಿದ ಮಾದಿಗ ಜನಾಂಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಾಗಿರಬೇಕು. (ಎರಡನೇ ಪ್ರಯತ್ನದಲ್ಲಿ ತೇರ್ಗಡೆಯಾದವರನ್ನು ಪರಿಗಣಿಸುವುದಿಲ್ಲ)

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಖುದ್ದಾಗಿ ಅಥವಾ ಬಸವರಾಜು. ಎಲ್ ಎಸ್. ಭಾಗ್ಯರಾಜು ನಿಲಯ, .2390, 2ನೇ ಕ್ರಾಸ್, ಮಾಷ್ಟರ್ ಪಿ.ಯು.ಕಾಲೇಜು ಹಿಂಭಾಗ, ವಿವೇಕ ನಗರ, ಹಾಸನ-573201. ಇಲ್ಲಿಗೆ ತಿಳಿಸಿರುವ ವಿಳಾಸಕ್ಕೆ ಅಂಚೆ ಮೂಲಕ ದಿನಾಂಕ:10.09.2025 ರ ಒಳಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಹೊ.ನ.ಪುರದಲ್ಲಿಂದು ಚಿತ್ರಕಲಾ ಸ್ಪರ್ಧೆ

ಹೊಳೆನರಸೀಪುರ: ಪಟ್ಟಣದ ಸೋಷಿಯಲ್ ಕ್ಲಬ್ ಆವರಣದಲ್ಲಿ ಸ್ವಜಯ್ ಚಿತ್ರಕಲಾ ಅಕಾಡೆಮಿ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಿದೆ ಎಂದು ಕಲಾವಿದೆ ಸ್ವಾತಿ ಅಜಯ್ ತಿಳಿಸಿದ್ದಾರೆ.

ಆ.24 ರ ಭಾನುವಾರ ಬೆಳಗ್ಗೆ ಸಂಸದ ಶ್ರೇಯಸ್ ಎಂ.ಪಟೇಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. 4 ವರ್ಷ ಮೇಲ್ಪಟ್ಟು ಎಲ್‌ಕೆಜಿ ಯಿಂದ ಪದವಿ ವಿದ್ಯಾರ್ಥಿಗಳ ವರೆಗಿನ 6 ವಿಭಾಗಗಳಲ್ಲಿ ಸ್ಪರ್ಧೆ ಆಯೋಜಿಸಲಾಗಿದೆ. ಪ್ರತಿ ವಿಭಾಗದಲ್ಲಿ ಪ್ರಥಮ, ದ್ವಿತೀಯ, ತೃತೀಯ ಹಾಗೂ ಭಾಗವಹಿಸಿದ ಪ್ರಮಾಣ ಪತ್ರವನ್ನು ನೀಡಲಾಗುವುದು. ಕೈಬರಹ ಚಿತ್ರಕಲಾ ಸ್ಪರ್ಧೆ ನಂತರದಲ್ಲಿ ನೊಂದಾಯಿಸಿಕೊಂಡವರಿಗೆ ತರಬೇತಿ ಸಹ ನೀಡಲಾಗುವುದು. ಆಸಕ್ತರು 9686554978ಗೆ ಕರೆಮಾಡಿ ನೊಂದಾಯಿಸಬಹುದಾಗಿದ್ದು, ಕಲಾಸಕ್ತರು ಭಾಗಿಯಾಗುವಂತೆ ಕೋರಿದ್ದಾರೆ.


**ಸಕಲೇಶಪುರದ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯದಲ್ಲಿ**

ಸಿ.ಮಿಸ್, ನಂ. 211 /2025

ಅರ್ಜಿದಾರರು : ಕಾವೇರಿ ಎಸ್.ಎಸ್.
ಕುಶಾಲನಗರ ಬಡಾವಣೆ, ಸಕಲೇಶಪುರ ಟೌನ್,
ಸಕಲೇಶಪುರ ತಾಲ್ಲೂಕು.

|| ವಿರುದ್ಧ ||

ರೆಸ್ಪಾಂಡೆಂಟರು : ಮುಖ್ಯಾಧಿಕಾರಿ, ಪುರಸಭೆ, ಸಕಲೇಶಪುರ.

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ತಾಯಿ ಪುಟ್ಟಮ್ಮ ಉರುಫ್ ಕೆಂಚಮ್ಮ ಕೋಂ ಸಿದ್ದಯ್ಯರವರು ಅನಾರೋಗ್ಯದಿಂದ ದಿನಾಂಕ 30/9/2023 ರಂದು ಸಕಲೇಶಪುರ ಟೌನ್ ಕುಶಾಲನಗರ ಬಡಾವಣೆಯ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಇವರ ಮರಣ ದೃಢೀಕರಣ ಪತ್ರ ಪಡೆಯಲು ಸಕಲೇಶಪುರ ಸಿವಿಲ್ ಜಡ್ಜ್‌ರವರ ನ್ಯಾಯಾಲಯದಲ್ಲಿ ಸಿಮಿಸ್ ಅರ್ಜಿ ಸಲ್ಲಿಸಿದ್ದು, ಘನ ನ್ಯಾಯಾಲಯವು ದಿನಾಂಕ 29/9/2025 ರಂದು ಹಿಯರಿಂಗ್ ನಿಗಧಿಪಡಿಸಿದೆ. ಆದ್ದರಿಂದ ಇವರ ವಾರಸುದಾರರು ಯಾರಾದರು ಇದ್ದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಏಕಪಕ್ಷೀಯವಾಗಿ ಆದೇಶ ಮಾಡಲಾಗುವುದು.

**ಈ ನ್ಯಾಯಾಲಯದ ಮೊಹರು ಹಾಗು ಸಹಿಯೊಂದಿಗೆ ದಿನಾಂಕ 22/8/2025 ರಂದು ನೀಡಲ್ಪಟ್ಟಿದೆ.**

ಅರ್ಜಿದಾರರ ಪರ ವಕೀಲರು
ಶಾರದ ಕಾಳಿಂಗಪ್ಪ

**ಆಡಳಿತ ಶಿರಸ್ತೇದಾರರು**
**ಸಿವಿಲ್ ಜಡ್ಜ್ ನ್ಯಾಯಾಲಯ ಸಕಲೇಶಪುರ**


# ಹುಚ್ಚಮ್ಮದೇವಿಗೆ ವಿಶೇಷ ಪೂಜೆ, ಅಭಿಷೇಕ



ಹಾರನಹಳ್ಳಿ: ಇಲ್ಲಿಗೆ ಸಮೀಪದ ಯಳವಾರೆ ಹುಚ್ಚಮ್ಮದೇವಿ ದೇವಾಲಯದಲ್ಲಿ ಶ್ರಾವಣ ಮಾಸದ ಅಮಾವಾಸೆ ಪ್ರಯುಕ್ತ ಶ್ರೀ ದೇವಿಯವರಿಗೆ ವಿಶೇಷ ಪೂಜೆ ಅಭಿಷೇಕ ನಡೆಯಿತು.

ಶ್ರೀ ಹುಚ್ಚಮ್ಮ ದೇವಿಯವರಿಗೆ ಬೆಣ್ಣೆಯ ಅಲಂಕಾರಮಾಡಲಾಗಿದ್ದು ಹುಚ್ಚಮ್ಮ ದೇವಿ ಕೋಡಮ್ಮ ದೇವಿ ಮತ್ತು ಶ್ರೀ ಜೇನುಕಲ್ಲು ಸಿದ್ದೇಶ್ವರಗೆ ವಿಶೇಷವಾಗಿ ಬಣ್ಣ ಬಣ್ಣದ ಹೂವುಗಳಿಂದ ಸುಂದರ ಅಲಂಕಾರ ಮಾಡಿ ಸ್ವಾಮಿಯವರ ಉತ್ಸವ ನಡೆಯಿತು.

ದೇವರಿಗೆ ಪೂಜೆ ಸಲ್ಲಿಸಿದ ನಂತರ ಯಳವಾರೆ ಚಲುವರಾಯಸ್ವಾಮಿ ಹಾರನಹಳ್ಳಿ ಧೂತರಾಯಸ್ವಾಮಿ ದೇವರನ್ನು ತಲೆಯ ಮೇಲೆ ಕೊಟ್ಟು ಕುಣಿಸಿದ್ದರು. ಅರೆ ವಾದ್ಯ ಇತರ ಕಲಾ ವಾದ್ಯಗಳು ಉತ್ಸವಕ್ಕೆ ಮೆರಗು ನೀಡಿತು ಬೋರನಕೊಪ್ಪಲು ವಿವಿಧ ಗ್ರಾಮದ ಭಕ್ತರುಗಳು ಬಂದು ದೇವರ ದರ್ಶನ ಪಡೆದರು. ಇದೇ ಸಂದರ್ಭದಲ್ಲಿ ಭಕ್ತರುಗಳಿಗೆ ಅನ್ನ ದಾಸೋಹ ವ್ಯವಸ್ಥೆ ಮಾಡಿದ್ದರು.

## ಸ್ಕೌಟ್ಸ್-ಗೈಡ್ಸ್ ಮಕ್ಕಳಿಗಾಗಿ ತಾಲ್ಲೂಕು ಮಟ್ಟದ ವಂಶವೃಕ್ಷ ರಚನಾ ಸ್ಪರ್ಧೆ

# ಮಕ್ಕಳಿಗೆ ನಮ್ಮ ಪರಂಪರೆಯ ಜ್ಞಾನ ಅತ್ಯಗತ್ಯ

• ಪ್ರಜೋದಯ ವರದಿ



**ಆಲೂರು:** ವಂಶವೃಕ್ಷ ರಚನೆ ಸ್ಪರ್ಧೆ ಮಕ್ಕಳಲ್ಲಿ ಪೂರ್ವಜರ ಮಾಹಿತಿ ನೀಡುವುದರ ಜೊತೆಗೆ ಪರಂಪರೆಯ ಬಗ್ಗೆ ಅರಿವನ್ನುಂಟು ಮಾಡುತ್ತದೆ ಎಂದು ಭಾರತ್ ಸ್ಕೌಟ್ಸ್ ಗೈಡ್ಸ್ ತಾಲ್ಲೂಕು ಕಾರ್ಯದರ್ಶಿ ಕೊಟ್ರೇಶ್ ಎಸ್. ಉಪ್ಪಾರ್ ಅಭಿಪ್ರಾಯಪಟ್ಟರು.

ಭಾರತ್ ಸ್ಕೌಟ್ಸ್ ಗೈಡ್ಸ್ ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ಮರಸು ಹೊಸಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸ್ಕೌಟ್ಸ್ ಗೈಡ್ಸ್ ಮಕ್ಕಳಿಗಾಗಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ವಂಶವೃಕ್ಷ ರಚನಾ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿ, ವಂಶವೃಕ್ಷವು ನಮ್ಮ ತಂದೆ-ತಾಯಿ, ಅವರ ತಂದೆ- ತಾಯಿಗಳು ಸಹೋದರ-ಸಹೋದರಿಯರು ರಕ್ತ ಸಂಬಧಗಳನ್ನು ತಿಳಿಸುತ್ತದೆ. ಆದರೆ ಇಂದಿನ ವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಅಪ್ಪ-ಅಮ್ಮ ಬಿಟ್ಟರೆ ಎಷ್ಟೋ ಮಕ್ಕಳಿಗೆ ತಾತ-ಮುತ್ತಾತಂದಿರ ಪರಿಕಲ್ಪನೆಯೇ ಇರುವುದಿಲ್ಲ, ಆದ್ದರಿಂದ ಸ್ಕೌಟ್ಸ್ ಗೈಡ್ಸ್ ರಾಜ್ಯ ಸಂಸ್ಥೆ ಮಕ್ಕಳಲ್ಲಿ ವಂಶವೃಕ್ಷದ ಪರಿಕಲ್ಪನೆ ಮೂಡಿಸಲು ತಳ ಮಟ್ಟದಿಂದಲೂ ಇಂತಹ ಅಗತ್ಯ ಸ್ಪರ್ಧೆಗಳನ್ನು ಏರ್ಪಡಿಸುತ್ತಿರುವುದು ಸ್ತುತ್ಯಾರ್ಹ ಎಂದು ಹೇಳಿದರು.

ಹಿರಿಯ ಗೈಡ್ ಶಿಕ್ಷಕಿ ಎಸ್.ಎಸ್. ಸುನೀತಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವೃಕ್ಷ ಎಂದರೆ ಸಂಬಧಗಳನ್ನು ಗರ್ಭೀಕರಿಸಿಕೊಂಡ ಅಂಶ. ನಮ್ಮ ಪೂರ್ವಜರ ವಿವರಗಳನ್ನು ಕ್ರಮಾನುಗತವಾಗಿ ದಾಖಲಿಸುವುದೇ ವಂಶವೃಕ್ಷ ರಚನೆ. ವೃಕ್ಷ ಫಲವತ್ತಾಗಿ ವಿಕಾಸಹೊಂದಬೇಕಾದರೆ ನೀರು, ಗೊಬ್ಬರ, ಹಾರೈಕೆ ಮಹತ್ವ ಪಡೆದಂತೆ ಇಲ್ಲಿ ವಂಶವೃಕ್ಷವೂ ನಮ್ಮ ಪೂರ್ವಜರ ಹಿಮ್ಮಾಹಿತಿ ನೀಡಲು ಅತ್ಯಗತ್ಯ. ಪೂರ್ವಜರ ಉತ್ತಮ ಗುಣಧರ್ಮಗಳು ವಂಶದ ಬಳುವಳಿಯಾಗಿ ನಮಗೆ ಬರುತ್ತವೆ. ಇದರಲ್ಲಿ ಕಲೆ, ಸಾಹಿತ್ಯ, ಕ್ರೀಡೆ ಹೀಗೆ ಅನೇಕ ಅಂಶಗಳ ವರ್ಗಾವಣೆಯ ಪ್ರಸಾರವನ್ನು ನೆನಪಿಸಿಕೊಳ್ಳಬಹುದು ಎಂದರು.

ಕಾರ್ಯಕ್ರಮದಲ್ಲಿ ತೀರ್ಪುಗಾರರಾದ ವಿಜ್ಞಾನ ಶಿಕ್ಷಕ ಲೋಕೇಶ್ ಮಾತನಾಡಿ, ವಂಶವೃಕ್ಷ ರಚನೆಯಲ್ಲಿ ಮಗುವಿನಿಂದ ಪ್ರಾರಂಭವಾಗಿ ಮೇಲ್ಮುಖವಾಗಿ ಸಾಗುತ್ತಾ ಅಣ್ಣ-ತಮ್ಮ, ಅಕ್ಕ-ತಂಗಿ, ಅಪ್ಪ, ಅಮ್ಮ, ಅತ್ತೆ-ಮಾವ, ಚಿಕ್ಕಪ್ಪ-ಚಿಕ್ಕಮ್ಮ, ದೊಡ್ಡಪ್ಪ-ದೊಡ್ಡಮ್ಮ, ಅಜ್ಜ, ಅಜ್ಜಿ, ಮುತ್ತಜ್ಜ, ಮುತ್ತಜ್ಜಿ ಹೀಗೆ ಹೆಸರು ಹಾಗೂ ಸಂಬಧಗಳನ್ನು ದಾಖಲಿಸುವುದಾಗಿದೆ. ಈ ದಿಸೆಯಲ್ಲಿ ನಮ್ಮ ಶಾಲೆಯ ಅನೇಕ ಮಕ್ಕಳು ಶ್ರಮ ವಹಿಸಿ ರಚನೆ ಮಾಡಿದ್ದಾರೆ ಎಂದರು.

ಸ್ಕೌಟ್ ಮಾಸ್ಟರ್ ಸುಬ್ರಹ್ಮಣ್ಯ ನಾಯಕ್, ಗೈಡ್ ಶಿಕ್ಷಕಿ ಅನಿತಾ, ಶಿಕ್ಷಕ ಅಣ್ಣಪ್ಪ, ಶಿಕ್ಷಕಿ ಸಂಧ್ಯಾ, ಕಂಪ್ಯೂಟರ್ ಶಿಕ್ಷಕಿ ಅನುಪಮ ಸೇರಿದಂತೆ ಹಲವರು ಉಪಸ್ಥಿತರಿದ್ದರು.

**ಸ್ಪರ್ಧಾ ವಿಜೇತರು:** ತಾಲ್ಲೂಕು ಮಟ್ಟದ ವಂಶವೃಕ್ಷ ರಚನಾ ಸ್ಪರ್ಧೆಯಲ್ಲಿ ಗಗನ ಎಸ್.ಎಲ್.- ಪ್ರಥಮ, ಎಚ್. ಪ್ರಕೃತಿ -ದ್ವಿತೀಯ, ಬಿ.ಎಲ್.ಯಶಸ್ -ತೃತೀಯ ಸ್ಥಾನ ಪಡೆದರೆ, ಎಚ್.ಕೆ.ಹೇಮಂತ್ ಹಾಗೂ ಹರ್ಷಾ ಎಸ್. ಅವರುಗಳು ಸಮಾಧಾನಕರ ಬಹುಮಾನ ಪಡೆದರು.


**ಸಕಲೇಶಪುರದ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯದಲ್ಲಿ**

ಸಿ.ಮಿಸ್, ನಂ. 212 /2025

ಅರ್ಜಿದಾರರು : ಕಾವೇರಿ ಎಸ್.ಎಸ್.
ಕುಶಾಲನಗರ ಬಡಾವಣೆ, ಸಕಲೇಶಪುರ ಟೌನ್,
ಸಕಲೇಶಪುರ ತಾಲ್ಲೂಕು.

|| ವಿರುದ್ಧ ||

ರೆಸ್ಪಾಂಡೆಂಟರು : ಮುಖ್ಯಾಧಿಕಾರಿ, ಪುರಸಭೆ, ಸಕಲೇಶಪುರ.

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ತಂದೆ ಸಿದ್ದಯ್ಯ ಬಿನ್ ಮಂಜಯ್ಯರವರು ಅನಾರೋಗ್ಯದಿಂದ ದಿನಾಂಕ 3/5/1989 ರಂದು ಸಕಲೇಶಪುರ ಟೌನ್ ಕುಶಾಲನಗರ ಬಡಾವಣೆಯ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಇವರ ಮರಣ ದೃಢೀಕರಣ ಪತ್ರ ಪಡೆಯಲು ಸಕಲೇಶಪುರ ಸಿವಿಲ್ ಜಡ್ಜ್‌ರವರ ನ್ಯಾಯಾಲಯದಲ್ಲಿ ಸಿಮಿಸ್ ಅರ್ಜಿ ಸಲ್ಲಿಸಿದ್ದು, ಘನ ನ್ಯಾಯಾಲಯವು ದಿನಾಂಕ 29/9/2025 ರಂದು ಹಿಯರಿಂಗ್ ನಿಗಧಿಪಡಿಸಿದೆ. ಆದ್ದರಿಂದ ಇವರ ವಾರಸುದಾರರು ಯಾರಾದರು ಇದ್ದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಏಕಪಕ್ಷೀಯವಾಗಿ ಆದೇಶ ಮಾಡಲಾಗುವುದು.

**ಈ ನ್ಯಾಯಾಲಯದ ಮೊಹರು ಹಾಗು ಸಹಿಯೊಂದಿಗೆ ದಿನಾಂಕ 22/8/2025 ರಂದು ನೀಡಲ್ಪಟ್ಟಿದೆ.**

ಅರ್ಜಿದಾರರ ಪರ ವಕೀಲರು
ಶಾರದ ಕಾಳಿಂಗಪ್ಪ

**ಆಡಳಿತ ಶಿರಸ್ತೇದಾರರು**
**ಸಿವಿಲ್ ಜಡ್ಜ್ ನ್ಯಾಯಾಲಯ ಸಕಲೇಶಪುರ**


ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019